ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೨ ಅಕ್ಟೋಬರ್-೨೦೧೧ ಸಂಚಿಕೆ-೩

ಅಣ್ಣಾ ಹಜಾರೆಯವರ ಹೋರಾಟ ಸಂವಿಧಾನಕ್ಕೆ ಸವಾಲೆ ?

*

ಗಾಂಧೀ ಮತ್ತು ಭೂಮಿ

*

ಅಪೂರ್ಣ ಕ್ರಾಂತಿಗಳು ಮತ್ತು ನಾವು

ಜನಪದ ವಿಚಾರದಲ್ಲಿ

ಅಕ್ಟೋಬರ್ - ೨೦೧೧

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಕ್ಟೋಬರ್ - ೨೦೧೧
ಸಂಪುಟ - ೧೨
ಸಂಚಿಕೆ - ೩

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಪ್ರಾರ್ಥನೆ

ನೀನು ಸಾಧಿಸಿದತುಲ
ದೇವಮಾನವ ಪದಕೆ
    ಉತ್ತುಂಗ-ಗಿರಿ-ಶ್ರೇಣಿ-ಸಾನುಗಳು
    ಬಾಗಿಹವು!
    ನಕ್ಷತ್ರ-ಗ್ರಹ-ಕೋಟಿ-ಭಾನುಗಳು
    ತೂಗಿಹವು!
ಕಡಲಾಳ, ಮುಗಿಲಗಲು ನಾಚಿ
ಕಳೆನೀಗಿಹವು!
ಕಲ್ಪತರು ಕಾಮಧೇನುಗಳು
ಬರಡಾಗಿಹವು!
    ವಜ್ರಬಂಧನದಲ್ಲಿ ಮುಕ್ತಿ
    ಸಂಚರಿಸಿಹುದು!
    ಕತ್ತಲೆಯು ಬಗೆಗರಗಿ
    ಬೆಳಕನೇ ವರಿಸಿಹುದು
ನೀ ಪಡೆದ
ನಿಸ್ಸೀಮಹೃದಯಘನಸಂಪದಕೆ!
    ತೆರೆಮರೆಯೊಳಿಹ ಗಾಯಕನ
    ನಿತ್ಯ-ಗೀತದೊಲು,
    ದೂರಸ್ಥ ಮುರಲಿಯಾ
    ಮಧುರಸಂಗೀತದೊಲು,
ತಾಯಿಯೆದೆಮರೆಯೊಳಿಹ
ಪ್ರೇಮ-ನವನೀತದೊಲು,
ಬಾನುಲಿಯ ಕೇಂದ್ರದಿಂ ಹರಿವ
ಸ್ವರಸ್ರೋತದೊಲು,
    ನೀ ನಡೆದು ತೋರ್ದ
    ಘನ ತತ್ವಗಳ ಬೆಳ್ವೆಳಗು
    ಅಶರೀರ ವಾಣಿಯಲಿ
    ಹರಿಯುತಿಹುದೆಲ್ಲೆಡೆಗು!

- ಈಶ್ವರ ಸಣಕಲ್ಲ

ವಿಚಾರ ದೀಪ್ತಿ

ಗ್ರಾಮಗಳು ನಗರಗಳ ಅನುಕರಣೆ ಮಾಡತೊಡಗಿವೆ. ಅಲ್ಲಿಯ ದುರ್ವ್ಯಸನಗಳು ಇಲ್ಲೂ ಇಣುಕಿ ಹಾಕತೊಡಗಿವೆ. ಅಲ್ಲಿಯ ಚಾ-ಕಾಫಿ, ಬೀಡಿ-ಸಿಗರೇಟು ಮುಂತಾದ ನಿರುಪಯೋಗಿ ವಸ್ತುಗಳ ಬಳಕೆ ರೂಢಿಯಾಗತೊಡಗಿವೆ. ಮಕ್ಕಳಿಗೆ ಬೇಕಾದ ಆಟದ ಸಾಮಾನುಗಳೂ ಹೊರಗಡೆಯಿಂದಲೇ ಬರತೊಡಗಿವೆ. ಉಡಿಗೆ-ತೊಡಿಗೆ, ಆಹಾರದ ಬೇರೆ ಬೇರೆ ದಿನಸಿಗಳು, ಎಲ್ಲವೂ ನಗರಗಳಿಂದಲೇ ಪೂರೈಕೆಯಾಗತೊಡಗಿದೆ. ಇದರ ಅರ್ಥವೇನು? ಗ್ರಾಮದ ಲಕ್ಷ್ಮಿ ನಗರಗಳಿಗೆ ಹರಿಯತೊಡಗಿದ್ದಾಳೆ. ಗ್ರಾಮದ ಸಭ್ಯಜನ ನಗರದ ಅನುಕರಣೆ ಮಾಡತೊಡಗಿದ್ದಾರೆ. ಹಿರಿಯರನ್ನು ನೋಡಿ ಕಿರಿಯರೂ ಅದೇ ದಾರಿಯಲ್ಲಿ ಸಾಗಿದ್ದಾರೆ. ಯಾರಿಗೂ ಇದರ ಬಗ್ಗೆ ದುಃಖವಿಲ್ಲ. ಎಂತಹದರ ಅನುಕರಣೆ ಮಾಡಬೇಕು ಎಂಬುದರ ತಿಳುವಳಿಕೆಯಿಲ್ಲ. ಒಬ್ಬರು ಮಾಡಿದ್ದನ್ನೇ ಇನ್ನೊಬ್ಬರು ಮಾಡುತ್ತಾರೆ. ಅಂಧನುಕರಣೆಯ ದಾರಿಯಲ್ಲಿ ಸಾಗುವುದೇ ಆಧುನಿಕ ಸಭ್ಯತೆ ಎಂದಾಗಿ ಹೋಗಿದೆ.

ನಗರಗಳಲ್ಲಿ ನಡೆಯುವ ವ್ಯಾಪಾರ ಹಳ್ಳಿಗಳಲ್ಲಿ ನಡೆಯುವುದಿಲ್ಲ. ಎಂತಲೆ ಗ್ರಾಮಗಳಲ್ಲಿ ಹಣ ಹೊಂದಾಣಿಕೆಯ ಕೆಲಸ ಕಷ್ಟಸಾಧ್ಯವಾಗುತ್ತದೆ. ಇದರಿಂದಾಗಿ ಪಾರಾಗುವ ಸಲುವಾಗಿ ಗ್ರಾಮದ ಜನ ಒಬ್ಬೊಬ್ಬರಾಗಿ ನಗರಗಳಿಗೆ ಧಾವಿಸುತ್ತಾರೆ. ಪರಿವಾರದ ಕೆಲವು ಜನ ಗ್ರಾಮಗಳಲ್ಲಿರುತ್ತಾರೆ. ಮತ್ತೆ ಕೆಲವರು ನಗರಗಳಲ್ಲಿರುತ್ತಾರೆ. ಮುಂದೆ ಗ್ರಾಮವನ್ನೇ ತೊರೆದು ನಗರಗಳಲ್ಲೆ ನಿಂತುಬಿಡುತ್ತಾರೆ ಈ ಜನ. ಹೀಗೆ ಗ್ರಾಮಪರಿವಾರ ನಗರ ಪರಿವಾರವಾಗಿಬಿಡುತ್ತದೆ. ಆದರೂ ಅವರ ಸಂಬಂಧ ಪೂರ್ಣವಾಗಿ ಗ್ರಾಮದಿಂದ ಕಡಿದುಹೋಗಿರುವುದಿಲ್ಲ. ಏಕೆ? ಪೂರ್ವಕಾಲದಿಂದಲೂ ಬದುಕಿ ಬಾಳಿದ ಗ್ರಾಮವಲ್ಲವೆ ಅದು. ಶಾಶ್ವತ ಜೀವನಕ್ಕಾಗಿ ಅವರ ಪೂರ್ವಿಕರು ಗಳಿಸಿಕೊಟ್ಟ ಆಸ್ತಿ, ಹೊಲ-ಮನೆ ಎಲ್ಲಾ ಇರುವುದು ಅಲ್ಲೆ. ಮನೆ ಏನೋ ನಾಶವಾಯಿತು. ಈಗ ಅದರ ಅಗತ್ಯವೂ ಅವರಿಗಿಲ್ಲ. ನಗರದಲ್ಲಿರುವ ಗಾರೆ ಸಿಮೆಂಟಿನ ಮನೆಯ ಮುಂದೆ ಈ ಮಣ್ಣು ಮನೆಯ ಅವಶ್ಯಕತೆಯಾದರೂ ಏಕೆ? ಝುಗ-ಝುಗಿಸುವ ದೀಪಗಳ ಮನೆಯ ಮುಂದೆ, ಹಣತೆ ದೀಪದ ಈ ಮನೆ ಕಣ್ಣಿಗಾದರೂ ಹೇಗೆ ಕಾಣಿಸೀತು. ಆದರೆ ಹೊಲದ ಮೇಲೆ ಅಕ್ಕರೆ! ಪ್ರೀತಿ! ತಮ್ಮ ಉದರ ಪೋಷಣೆಯಾಗುವುದಲ್ಲಾ ಎನ್ನುವುದರ ಸಲುವಾಗಿ ಮಾತ್ರ ಇದು. ಹೀಗೆ ಗ್ರಾಮಗಳು ಇಂದು ಪ್ರಾಣಹೀನವಾಗತೊಡಗಿವೆ. ಗ್ರಾಮಕ್ಕೆ ಪ್ರಾಣಾಧಾರವೆಂದರೆ ಪ್ರೇಮ ಒಂದೇ. ಈ ಪ್ರೇಮ ಶಕ್ತಿಯೆ ಇಲ್ಲದಾದಮೇಲೆ ಗ್ರಾಮಗಳಲ್ಲಿ ಉಳಿಯುವುದಾದರೂ ಏನು? ನಗರಗಳ ಸುಳಿಯಲ್ಲಿ ಬಿದ್ದಿರುವ ಗ್ರಾಮಗಳನ್ನು ಉಳಿಸದೆ ಹೋದರೆ ಭಾರತದ ಭವಿಷ್ಯವೇ ಅಂಧಕಾರವಾದೀತು.

– ವಿನೋಬಾ

ಅಣ್ಣಾ ಆಂದೋಲನ ಸಂವಿಧಾನಕ್ಕೊಂದು ಸವಾಲೆ?

– ಸುರೇಂದ್ರ ಕೌಲಗಿ

ಚುನಾವಣೆಯ ಅಣುಬಾಂಬನ್ನಿತ್ತು ಕೈಕೊಟ್ಟಿರುವ ಸಂವಿಧಾನಕ್ಕೆ ಜೈ.

- ಗೋಪಾಲಕೃಷ್ಣ ಅಡಿಗ

ಈಗ ದೇಶದ ಹಿತಚಿಂತಕರನ್ನೂ, ನೀತಿ ನಿರ್ಮಾಪಕರನ್ನೂ, ಅಧಿಕಾರಿಗಳನ್ನೂ ಕೆಣಕುತ್ತಿರುವ ಪ್ರಶ್ನೆ ಅಣ್ಣಾ ಹಜಾರೆಯವರು ಕಳೆದ ಏಪ್ರಿಲ್ ತಿಂಗಳಿನಿಂದ ನಡೆಸುತ್ತಿರುವ ಭ್ರಷ್ಟಾಚಾರ ವಿರೋಧಿ ಆಂದೋಲನ ಎಷ್ಟು ಸಫಲವಾಗಿದೆ ಮತ್ತು ಎಷ್ಟು ವಿಫಲವಾಗಿದೆ ಎಂಬುದು. ಈ ಪ್ರಶ್ನೆಗೆ ತಟಸ್ಥ ಭಾವನೆಯಿಂದಲೂ, ಯಾವುದೇ ಪೂರ್ವಗ್ರಹ ಪೀಡಿತವಲ್ಲದ ವಿಚಾರದಿಂದಲೂ ಉತ್ತರ ಹುಡುಕಬೇಕಾದುದು ಅಗತ್ಯವಾಗಿದೆ. ಇದಕ್ಕೆ ಪ್ರಮುಖವಾಗಿ ಎರಡು ಕಾರಣಗಳಿವೆ. ಒಂದು, ಅಣ್ಣಾರವರೇ ಹೇಳಿದಂತೆ ಅವರ ಈ ಹೋರಾಟಕ್ಕೆ ಅರ್ಧ ಜಯ ಮಾತ್ರ ಸಿಕ್ಕಿದೆ. ಸಾಗಬೇಕಾದ ದಾರಿ ಇನ್ನೂ ಅರ್ಧವಿದೆಯೆಂಬುದು; ಎರಡನೆಯದು ಅಣ್ಣಾರವರ ಈ ಹೋರಾಟದಿಂದ ಬಲಬಂದಿದೆಯೇ ಅಥವಾ ಅದು ದುರ್ಬಲವಾಯಿತೇ ಎಂಬುದು. ಇವುಗಳ ಜೊತೆಗೆ ಇನ್ನೊಂದು ಕಾರಣವೇನೆಂದರೆ ಅಣ್ಣಾರವರ ಹೋರಾಟ ಪ್ರಜಾತಂತ್ರಾತ್ಮಕ ಅಡಳಿತ ವ್ಯವಸ್ಥೆಯಲ್ಲಿ ಒಂದು ಮಾದರಿ ಹೋರಾಟವಾಗಿದೆಯೆ ಮುಂದೆಯೂ ಅಗತ್ಯವಿದ್ದಾಗ ಅದೇ ಪ್ರಕಾರದ ಹೋರಾಟ ನಡೆಸಬಹುದೇ, ಅಥವಾ ಅವರ ಹೋರಾಟ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮಧ್ಯ ಬಿರುಕನ್ನುಂಟು ಮಾಡಿದೆಯೆ ಎಂಬುದು. ಪ್ರತಿವರ್ಷ ಜನವರಿ ೨೬ರಂದು ಗಣರಾಜ್ಯೋತ್ಸವ ಆಚರಿಸುವಾಗ ಸಂವಿಧಾನದ ಬಗ್ಗೆಯೂ ಮತ್ತು ಸಂವಿಧಾನದತ್ತ ಹಕ್ಕುಗಳ ಬಗ್ಗೆಯೂ ಪುಂಖಾನು ಪುಂಖವಾಗಿ ಮಾತನಾಡುತ್ತೇವೆ. ಅಂತೆಯೇ ಪ್ರತಿವರ್ಷ ಆಗಸ್ಟ್ ೧೫ರಂದು 'ಸ್ವಾತಂತ್ರ್ಯ'ದ ಮಹತ್ವ ಕುರಿತು ಹೆಗ್ಗಳಿಕೆಯ ಮಾತಾಡುತ್ತೇವೆ. ಇಲ್ಲಿ ಒಂದು ವಿಪರ್ಯಾಸ ಅನುಭವಕ್ಕೆ ಬರುತ್ತದೆ. ಸಂವಿಧಾನ ತನ್ನ ಒಡಲಲ್ಲಿಯ ಅನೇಕ ಪ್ರಕಾರದ ನಿಯಮಾವಳಿಗಳಿಂದ ದೇಶದ ಜನತೆಯನ್ನು, ಅದರ ಆಚಾರ–ವಿಚಾರಗಳನ್ನು ಸಾಕಷ್ಟು ಬಿಗಿಯಾದ ಚೌಕಟ್ಟಿನಲ್ಲಿಟ್ಟಿದೆ. ಆದರೆ ಅದೇ ಸ್ವಾತಂತ್ರೋತ್ಸವ ಜನತೆಗೆ ತಾನು ಎಷ್ಟೊಂದು ಸರ್ಕಾರಕ್ಕೆ ಪರಾಧೀನವಾಗಿದ್ದೇನೆಂಬ ವಿಚಾರವನ್ನೂ ಕೆಣಕುತ್ತದೆ; ಹಾಗು ದೇಶಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳಾದರೂ ಜನತೆಯ ಅನೇಕ ಸಮಸ್ಯೆಗಳು ಪರಿಸಹರಿಸಲ್ಪಡದೇ ಇರುವುದಕ್ಕೆ ಅಸಂತೋಷವೂ ತೀವ್ರವಾಗಿಯೇ ಪ್ರಕಟಗೊಳ್ಳುತ್ತದೆ. ಅಲ್ಲದೆ, ಜಮ್ಮು–ಕಾಶ್ಮೀರದಲ್ಲಿ, ಹಿಮಾಲಯ

ತಪ್ಪಲಲ್ಲಿರುವ ರಾಜ್ಯಗಳಲ್ಲಿ ಸದಾ ನಡೆಯುವ ವಿಘಟನಾತ್ಮಕ ಘಟನೆಗಳೂ, ಎಡಪಂಥೀಯ ಹಿಂಸಾಚಾರಣೆಯೂ, ಕೋಮು ಭಾವನೆಯಾಧಾರಿತ ಉಗ್ರರ ಭಯೋತ್ಪಾದಕತೆ ಮುಂತಾದವುಗಳನ್ನು ನಿಗ್ರಹಿಸುವುದಕ್ಕೆ ದೇಶದ ಸ್ವಾತಂತ್ರ್ಯ ಏಕೆ ಸಮರ್ಥವಾಗಿಲ್ಲವೆಂಬ ಪ್ರಶ್ನೆಗಳೂ ತೀವ್ರವಾಗಿಯೇ ಕಾಡುತ್ತವೆ. ಇಂಥ ರಾಜಕೀಯ ಪ್ರಶ್ನೆಗಳ ಜೊತೆಗೆ ಆರ್ಥಿಕ ಅಸಮಾನತೆ, ಭ್ರಷ್ಟಾಚಾರ, ಅಭಿವೃದ್ಧಿಯ ಅಸಮತೋಲನೆಯಂಥ ಸಮಸ್ಯೆಗಳೂ ತೀವ್ರವಾಗಿ ಪೀಡಿಸುತ್ತವೆ. ಈ ಪ್ರಕಾರದ ಪ್ರಶ್ನೆಗಳು ಎದುರಾದಾಗ ದೇಶದ ಸ್ವಾತಂತ್ರ್ಯವೆಂಬುದು ಬರಿ ಹಗಲುಗನಸೇನೆಂದೋ ಅನಿಸುತ್ತದೆ. ಮನಸ್ಸು ಹೊಯ್ದಾಡುತ್ತದೆ, ವಿಚಾರಗಳು ತಾಕಲಾಡುತ್ತವೆ. ಆಗ ಸಂವಿಧಾನದ ಪ್ರಬಲತೆ ದುರ್ಬಲತೆಯ ಬಗ್ಗೆ ಮಂಥನ ನಡೆಯುತ್ತದೆ. ಸ್ವಾತಂತ್ರ್ಯ ಪ್ರಿಯರು ಸಂವಿಧಾನಕ್ಕೆ ಮಿಗಿಲಾದುದು ಲೋಕಾಭಿಪ್ರಾಯವೆಂದೂ, ಸಂವಿಧಾನಪ್ರಿಯರು ಸಂವಿಧಾನವೇ ಎಲ್ಲ ಬಗೆಯ ಅಭಿಪ್ರಾಯಗಳಿಗೆ ಮಿಗಿಲಾದುದೂ ಹಾಗೂ ಜನತೆ ಕಡ್ಡಾಯವಾಗಿ ಅನುಸರಿಸಬೇಕಾದ ನೀತಿಸಂಹಿತೆಯೆಂದೂ ವಾದಿಸುತ್ತಾರೆ.

ಅಣ್ಣಾರವರ ಹೋರಾಟ ಈ ಪ್ರಕಾರದ ವೈಚಾರಿಕ ಅಡಕತ್ತರಿಯಲ್ಲಿ ದೇಶವನ್ನು ತಂದುನಿಲ್ಲಿಸಿದೆ. ಅಣ್ಣಾರವರ ಹೋರಾಟದಲ್ಲಿ ಸಂವಿಧಾನದ ಶ್ರೇಷ್ಠತೆ ಮತ್ತು ಲೋಕಾಭಿಪ್ರಾಯದ ಶ್ರೇಷ್ಠತೆ ಇವುಗಳಲ್ಲಿ ಯಾವುದು ಹೆಚ್ಚು ಶ್ರೇಷ್ಠವೆಂಬ ಪ್ರಶ್ನೆ ಪ್ರಮುಖವಾಗಿ ಎತ್ತಲ್ಪಟ್ಟಿದೆ. ಅಣ್ಣಾ ಹಜಾರೆ ಮತ್ತು ಅವರ ಭ್ರಷ್ಟಾಚಾರ ವಿರೋಧಿ ತಂಡ ಸಂವಿಧಾನಬದ್ಧವಾಗಿ ಚುನಾಯಿತವಾದ ಲೋಕಸಭೆಗೆ ಮೂಗುದಾರ ಹಾಕಲು ಪ್ರಯತ್ನಿಸುತ್ತಿದೆ ಎಂಬ ಆಕ್ಷೇಪಣೆ ಅವರ ಬಗ್ಗೆ ಇದೆಯಾದರೆ ಸಂವಿಧಾನವು ಭಾರತೀಯ ಜನತಾ ಪ್ರತಿನಿಧಿಗಳಿಂದ ರಚಿಸಲ್ಪಟ್ಟು ಜನತೆ ಅದನ್ನು ಆತ್ಮಾರ್ಪಿತ ಮಾಡಿಕೊಂಡಿದೆಯಾದ್ದರಿಂದ ಲೋಕಾಭಿಪ್ರಾಯವು ಲೋಕಸಭೆಗೆ ಅಗತ್ಯವಾದಾಗ ಮೂಗುದಾರವನ್ನು ಹಾಕಬಹುದೆಂಬ ವಾದ ಅಣ್ಣಾರವರ ಆಂದೋಲನವನ್ನು ಸಂವಿಧನಾತ್ಮಕವಾಗಿಯೇ ಸಮರ್ಥಿಸುವ ಪ್ರಯತ್ನ ನಡೆದಿದೆ.

ಈಗ ನಮ್ಮ ಸಂವಿಧಾನದ ಇತಿಮಿತಿ ಕುರಿತು ಆಲೋಚಿಸುವ ಕಾಲ ಬಂದಿದೆಯಲ್ಲದೆ ಸಂವಿಧಾನ ನಾಗರಿಕತೆಯ ಲಕ್ಷಣವೇ, ಅನಾಗರಿಕತೆಯ ಲಕ್ಷಣವೆ ಎಂಬ ಪ್ರಶ್ನೆಯನ್ನೂ ಕೇಳುವ ಕಾಲಬಂದಿದೆ. ಇಪ್ಪತ್ತೊಂದನೇ ಶತಮಾನ ತನ್ನೆಲ್ಲ ಅತ್ಯಾಧುನಿಕ ಶೋಧನೆಗಳು, ಆರ್ಥಿಕ ಪ್ರಗತಿ, ತಂತ್ರಜ್ಞಾನದ ಆಸ್ಫೋಟನೆಗಳ ಕಾರಣದಿಂದ ಮನುಷ್ಯ ಮತ್ತು ಅವನ ಸಮಾಜ ಅನಾಗರಿಕತೆಯಿಂದ ನಾಗರಿಕತೆಯತ್ತ ಸಾಗಿಬಂದಿದೆ ಮತ್ತು ಸಾಗುತ್ತಿದೆ ಎಂಬ ಕಾರಣಕ್ಕಾಗಿ ಆಲೋಚಿಸುವುದಾದರೆ ಸಂವಿಧಾನ ನಾಗರಿಕತೆಯ ಕಡೆಗಿನ ಪ್ರಯಾಣಕ್ಕೆ ಸಾಧನವೋ, ವಿಘ್ನವೋ ಎಂದು ಕೇಳಬೇಕಾಗುತ್ತದೆ. ಒಂದಾನೊಂದು ಭವಿಷ್ಯದಲ್ಲಿ ರಾಜ್ಯ ಕರಗಿ ಹೋಗುತ್ತದೆ, ಸಮಾಜ ಸ್ವನಿಯಂತ್ರಿತವಾಗಿ ವ್ಯವಹರಿಸುತ್ತದೆ ಎಂಬ ವಿಚಾರ ಹದಿನೆಂಟನೇ ಶತಮಾನದ್ದಾಗಿದ್ದರೂ ಇಪ್ಪತೊಂದನೇ ಶತಮಾನದಲ್ಲಿ ಸಂಭವಿಸಿರುವ ಅಗಾಧ ನಾಗರಿಕತೆಯ ಪ್ರಗತಿ ಸಂವಿಧಾನವನ್ನೂ, ಅದರೊಟ್ಟಿಗೆ ರಾಜ್ಯವನ್ನೂ ಸಾರ್ಥಕ

ಮಾಡಬೇಕಾದ ಸವಾಲು ಇಂದಿನ ಜಗತ್ತಿನ ಮುಂದೆ ಇದೆ ಎಂಬ ಅನಿಸಿಕೆ ಬಂದಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ "ಅಸತೋ ಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ" ಎಂಬುದು ಮಾನವನ ಹೃದಯಾಂತರಾಳದ ಅಭಿಲಾಷೆಯಾಗಿದೆ.

ಅಣ್ಣಾರವರ ಹೋರಾಟ ಮೂಲಭೂತವಾಗಿ ಭ್ರಷ್ಟಾಚಾರ ವಿರೋಧಿಸುವುದಕ್ಕಾಗಿ ಇರುವುದಾದರೂ ಆ ಹೋರಾಟ ಒಂದು ರೀತಿಯಲ್ಲಿ ಸಂವಿಧಾನದ ಅಗತ್ಯ, ಅಗತ್ಯವಿದ್ದರೆ ಅದು ಎಷ್ಟು ದೂರ, ಯಾವ ಸಂದರ್ಭದಲ್ಲಿ ಅದು ಅಗತ್ಯ, ಯಾವಾಗ ಅನಗತ್ಯ ಮತ್ತು ಅಗತ್ಯವಿದ್ದಾಗ ಜನತೆ ಅದನ್ನು ಪೂರ್ಣ ಗೌರವಿಸುವುದೇ, ಪಾಲಿಸುವುದೇ ಎಂಬೀತ್ಯಾದಿ ಪ್ರಶ್ನೆಗಳೂ ಎದ್ದಿವೆ.

ಭಾರತಕ್ಕೆ ಸಂಬಂಧಿಸಿದ ಮಟ್ಟಿಗೆ ಸಂವಿಧಾನ ಕುರಿತಾದ ಈ ವೈಚಾರಿಕ ತುಮಲ ಸ್ವಾಗತಾರ್ಹ. ಏಕೆಂದರೆ ಭಾರತದ ಪ್ರಜಾಪ್ರಭುತ್ವ ಜಗತ್ತಿನಲ್ಲಿಯೇ ದೊಡ್ಡ ಪ್ರಜಾಪ್ರಭುತ್ವ, ಗಾತ್ರದಲ್ಲಿ ದೊಡ್ಡದಾಗಿರುವಂತೆ ಗುಣದಲ್ಲಿಯೂ ದೊಡ್ಡದಾಗಿ ಬೆಳೆದು ಪ್ರಜಾಪ್ರಭುತ್ವವಿರುವ ಇತರ ದೇಶಗಳಿಗೂ, ಸರ್ವಾಧಿಕಾರಿರಾಜ್ಯಸತ್ತೆಯಿರುವ ದೇಶಗಳಿಗೂ, ಧಾರ್ಮಿಕ ಮೂಲಭೂತವಾದಿ ಸರ್ಕಾರವಿರುವ ದೇಶಗಳಿಗೂ ಮಾದರಿಯಾಗಬೇಕಿದೆ. ಸ್ವತಂತ್ರ ಭಾರತದ ಮೊದಲ ಪ್ರಧಾನಿ ನೆಹರೂರವರು ೧೯೪೬ ಡಿಸೆಂಬರ್‌ನಲ್ಲಿ ಸಂವಿಧಾನದ ಗೊತ್ತುಗುರಿಗಳನ್ನು ಪ್ರಕಟಿಸುವ ಠರಾವೊಂದನ್ನು ಸಂವಿಧಾನ ರಚನಾ ಸಭೆಯಲ್ಲಿ ಮಂಡಿಸುತ್ತಾ ಭಾರತದ ಪ್ರಜಾಪ್ರಭುತ್ವ ಪಾಶ್ಚಿಮಾತ್ಯ ದೇಶಗಳಲ್ಲಿಯ ಪ್ರಜಾಪ್ರಭುತ್ವದ ಕಾಪಿಯಾಗಲಾರದು. ಏಕೆಂದರೆ ಆ ದೇಶಗಳಲ್ಲಿಯ ಪ್ರಜಾಪ್ರಭುತ್ವ ಉಳಿಯಬೇಕಾದರೆ ಅವೇ ಸ್ವತಃ ಬಹಳಷ್ಟು ಸುಧಾರಣೆ ಹೊಂದಬೇಕಾಗಿದೆಯೆಂದು ಹೇಳಿದ್ದರು. ಆದ್ದರಿಂದ ಭಾರತದ ಪ್ರಜಾಪ್ರಭುತ್ವ ವೈಚಾರಿಕವಾಗಿ, ನೈತಿಕವಾಗಿ ಬೆಳೆಯಬೇಕು; ತನ್ನ ಆತ್ಮವಿಶ್ವಾಸವನ್ನು ಬೆಳೆಸಬೇಕು. ತನ್ನಲ್ಲಿಯ ಒಳ್ಳೆಯ ವಿಚಾರಗಳಿಂದ ಜಗತ್ತನ್ನೇ ಭಾರತೀಕರಣಗೊಳಿಸಬೇಕೆಂಬ ಮಹತ್ವಾಕಾಂಕ್ಷೆ ಇಟ್ಟುಕೊಳ್ಳಬೇಕು.

ಅಣ್ಣಾ ಹಜಾರೆಯವರ ಹೋರಾಟ ಸಂವಿಧಾನವನ್ನು ಬಲಪಡಿಸಿದೆಯೇ, ಪ್ರಜಾಪ್ರಭುತ್ವವನ್ನು ಬಲಪಡಿಸಿದೆಯೇ ಎಂದು ಆಲೋಚಿಸುವುದು ಅಗತ್ಯ. ಏಕೆಂದರೆ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಒಂದೇ ನಾಣ್ಯದ ಮುಖಗಳೇನೋ ಎಂಬಂತಿವೆ. ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕಾದರೆ ಅದಕ್ಕೊಂದು ಸಂವಿಧಾನದ ಚೌಕಟ್ಟು ಬೇಕೆಂಬುದು ರಾಜಕೀಯ ತತ್ವಶಾಸ್ತ್ರಿಗಳ ಅಭಿಪ್ರಾಯ; ಪ್ರಜಾಪ್ರಭುತ್ವವು ಸಂಪೂರ್ಣವಾಗಿ ಪ್ರಜೆಗಳದೇ ಆಗಿದ್ದು, ಅವರೇ ನಡೆಸಿಕೊಂಡು ಹೋಗುವಂತಾಗಿರಬೇಕು, ರಾಜ್ಯಾಧಿಕಾರಿಗಳು ನೆಪಮಾತ್ರದಲ್ಲಿರಬೇಕು ಹಾಗೂ ರಾಜ್ಯಾಧಿಕಾರಿಗಳ ಮೇಲೆ ಪ್ರಜೆಗಳದು ಪರೋಕ್ಷವಾಗಿ ಅಂಕುಶವಿರಬೇಕೆಂಬುದು ಆದರ್ಶವಾದಿ ಪ್ರಜಾಪ್ರಭುತ್ವಪರ ವಿಚಾರವಾದಿಗಳ ಅಭಿಪ್ರಾಯ. ಇವೆರಡೂ ಪ್ರಕಾರದ ಅಭಿಪ್ರಾಯಗಳು ಸರಿಯೆಂಬುದು ಸ್ವಾತಂತ್ರೋತ್ತರ ಭಾರತೀಯರಿಗೆ ಇದುವರೆಗಿನ ರಾಜಕೀಯ ಅನುಭವ ಹೇಳುತ್ತದೆ. ಇದಕ್ಕೆರಡು ಉದಾಹರಣೆಗಳಾಗಿ ಭಾರತೀಯರ

ಮುಂದೆ ಇವೆ. ಒಂದನೆಯದು ೧೯೭೫ರಲ್ಲಿ ಇಂದಿರಾಗಾಂಧೀಯವರು ಸಂವಿಧಾನವನ್ನೂ, ಸಂವಿಧಾನದತ್ತವಾಗಿದ್ದ ಪ್ರಜೆಗಳ ಹಕ್ಕುಗಳನ್ನೂ ಬದಿಗಿಟ್ಟು ತಾವು ಸರ್ವಾಧಿಕಾರಿಯಾಗಲು ಪ್ರಯತ್ನಿಸಿದ್ದು; ಎರಡನೆಯದು ಸಂವಿಧಾನಾತ್ಮಕವಾಗಿ ರಚಿತಗೊಂಡ ಪ್ರಜಾಪ್ರಭುತ್ವವಾದಿ ರಾಜಕೀಯ ಪ್ರಕ್ಷಗಳು ರಚಿಸಿದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿಯ ಜನನಾಯಕರು ತಾವು ಜನತಾ ಪ್ರತಿನಿಧಿಗಳೆಂಬುದನ್ನೂ ಹಾಗೂ ಸಂವಿಧಾನದ ಗೌರವವನ್ನು ಕಾಪಾಡುವುದಾಗಿ ಪ್ರತಿಜ್ಞೆ ಸ್ವೀಕರಿಸಿದ್ದೇವೆಂಬುದನ್ನೂ ಮರೆತು ಅಧಿಕಾರದ ದುರುಪಯೋಗಪಡಿಸಿಕೊಂಡು ಸ್ವಾರ್ಥರೂ, ಸುಖಲೋಲುಪರೂ ಆಗಿ ಭ್ರಷ್ಟಾಚಾರದಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದು, ಅದರಿಂದಾಗಿ ಪ್ರಜಾಪ್ರಭುತ್ವದ ಮೂಲದ್ರವ್ಯವಾದ ಪ್ರಜೆಗಳು ತ್ರಸ್ತರಾಗಿ ಹೋದರು. ನ್ಯಾಯ ದಯಪಾಲಿಸಬೇಕಾಗಿದ್ದ ನ್ಯಾಯಾಧೀಶರೂ ಭ್ರಷ್ಟರಾದರು. ಆಗ ಅಣ್ಣಾ ಹಜಾರೆಯಂಥ ಸಾಮಾನ್ಯ ನಾಗರೀಕನ ನೇತೃತ್ವದಲ್ಲಿಯೇ ತಮ್ಮದೇ ಪ್ರಜಾಸರ್ಕಾರದ ವಿರುದ್ಧ ಎರಡು ತಿಂಗಳುಗಳಕಾಲ ಅಹಿಂಸಾತ್ಮಕ ಮತ್ತು ಶಾಂತಿಯುತ ಹೋರಾಟ ನಡೆಸಿದರು ಮತ್ತು ನಿರಂಕುಶ ಆಡಳಿತದತ್ತ ಹೊರಟಿದ್ದ ಸರ್ಕಾರವನ್ನು ತಹಬಂದಿಗೆ ತಂದರು. ಅಂದರೆ ರಾಜ್ಯಶಕ್ತಿ ಮತ್ತು ಲೋಕಶಕ್ತಿ ಮಧ್ಯ ಸಂಘರ್ಷ ನಡೆಯಿತು. ಇವೆರಡೂ ಪ್ರಸಂಗಗಳಲ್ಲಿ ಅಂತಿಮವಾಗಿ ಜಯಿಸಿದ್ದು ಜನಾಭಿಪ್ರಾಯವೇ ಹೊರತು ಸಂವಿಧಾನವಲ್ಲ; ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೇನೆಂದರೆ ಭಾರತೀಯರು ಯಾವ ಸಂದರ್ಭದಲ್ಲೂ ಬಯಸಿದ್ದು ಸಂವಿಧಾನರಹಿತ ರಾಜ್ಯವನಲ್ಲ. ಬದಲಿಗೆ ಪರಿಶುದ್ಧವಾಗುತ್ತ ಹೋಗುವ ಪ್ರಜಾಪ್ರಭುತ್ವವನ್ನೇ ಬಯಸಿದ್ದಾರೆ. ಸಾಮ್ರಾಜ್ಯಶಾಹಿ ದಾಹವುಳ್ಳದ್ದಾಗಿದ್ದ ವಿದೇಶಿ ಆಡಳಿತವನ್ನು ಮಹಾತ್ಮಾ ಗಾಂಧೀಯವರ ನೇತೃತ್ವದಲ್ಲಿ ಕಿತ್ತೊಗೆದು ಸ್ವದೇಶಿ ಆಡಳಿತದ ಬಯಕೆಯ ಹಿಂದೆ ಇದ್ದ ಪ್ರಬಲವಾದ ಇಚ್ಛೆ ಇದೇಯಾಗಿತ್ತು. ಗಾಂಧೀಜಿಯವರೇ ಹೇಳಿದಂತೆ "ನಾವು ಎಷ್ಟರ ಮಟ್ಟಿಗೆ ಆಂತರಿಕ ಸ್ವಾತಂತ್ರ್ಯಕ್ಕೆ ಅರ್ಹರಾಗುವೆವೋ ಅಷ್ಟೇ ಪ್ರಮಾಣಕ್ಕೆ ಮಾತ್ರ ನಾವು ಬಾಹ್ಯ ಸ್ವಾತಂತ್ರ್ಯವನ್ನು ಪಡೆಯುತ್ತೇವೆ." ಇಂಥ ಆಂತರಿಕ ಸ್ವಾತಂತ್ರ್ಯ ಪಡೆಯಬೇಕೆಂಬುದೇ ಪ್ರತಿಯೊಬ್ಬ ಭಾರತೀಯನ ಆಸೆಯಾಗಿದೆ. ಇಂಥ ಸ್ವಾತಂತ್ರ್ಯ ಪಡೆಯುವ ನಿಟ್ಟಿನಲ್ಲಿಯೇ ಅಣ್ಣಾರವರ ಹೋರಾಟವೂ ಒಂದು. ಭ್ರಷ್ಟತೆ ಮುಕ್ತ ಆಡಳಿತ ಮಾತ್ರ ನಾಗರಿಕನಿಗೆ ನಿಜವಾದ ಸ್ವಾತಂತ್ರ್ಯ ಕೊಡಬಲ್ಲದು. ಇಂಥ ಸ್ವಾತಂತ್ರ್ಯವನ್ನು ಒದಗಿಸುವ ಮಾಧ್ಯಮವೇ ಸಂವಿಧಾನ.

ಎಲ್ಲ ದೇಶಗಳ ಸಂವಿಧಾನಗಳು ಹೆಚ್ಚಾಗಿ ಸರ್ಕಾರದ ಪರವಾಗಿ ಇರುತ್ತವೆಯೇ ಹೊರತು ಜನತೆಯ ಪರವಾಗಿಯಲ್ಲ. ಏಕೆಂದರೆ ಸರ್ಕಾರಗಳು ಜನತೆಯ ಪರವಾಗಿ ಆಳುವುದರ ಬದಲು ತಮ್ಮ ಪರವಾಗಿಯೇ ಆಡಳಿತ ನಡೆಸುತ್ತವೆ. ಇಂಥದೊಂದು ಮಾತು ೨೦೦೦ನೇ ಇಸ್ವಿಯಲ್ಲಿ ಪ್ರಕಟಗೊಂಡ ಗುರುಚರಣ ದಾಸ್ ಎಂಬ ಬುದ್ಧಿಜೀವಿ-ಚಿಂತಕ ಬರೆದ 'ಇಂಡಿಯಾ ಅನ್‌ಬೌಂಡ್' ಎಂಬ ಪುಸ್ತಕದಲ್ಲಿ ಉಲ್ಲೇಖಿತವಾಗಿದೆ. ಈ ಮಾತು ಬಹುಮಟ್ಟಿಗೆ ನಿಜ. ಸರ್ಕಾರಕ್ಕೆ

ತನ್ನದೇ ಆದ ಆಡಳಿತಾತ್ಮಕ ಒತ್ತಡಗಳಿರುವುದುದರಿಂದ ಅನೇಕ ಸಲ ಅದು ಜನತೆಯ ಪರವಾಗಿ ಕೆಲಸ ಮಾಡದೆ ತನ್ನ ಪರವಾಗಿಯೇ ಕೆಲಸ ಮಾಡಬೇಕಾಗುತ್ತದೆ.

ಇಪ್ಪತ್ತೊಂದನೇ ಶತಮಾನ ವೇಗದ ಶತಮಾನ. ಎಲ್ಲೆಲ್ಲೂ ಸ್ಪರ್ಧೆ, ಸ್ಪರ್ಧೆಗೆ ಇಳಿಯದ ದೇಶ ಅಥವಾ ಸ್ಪರ್ಧೆಯಲ್ಲಿ ಸೋಲುವ ದೇಶದ ಭವಿಷ್ಯ ಕರಾಳವಾಗುತ್ತದೆಂಬ ಸಾರ್ವತ್ರಿಕ ನಂಬಿಕೆ ಎಲ್ಲ ಪ್ರಕಾರದ ಅಭಿವೃದ್ಧಿಗೆ ಚೇತನಕೊಡುವ ಮಹಾ ಇಂಧನವಾಗಿದೆ. ಶತಮಾನದ ಬದಲಾವಣೆಯ ಈ ಬಿರುಗಾಳಿಯಿಂದ ಭಾರತ ತಪ್ಪಿಸಿಕೊಳ್ಳಲಾರದು. ಯುಗದ ಅವಶ್ಯಕತೆಗೆ ತಕ್ಕುದಾಗಿ ತನ್ನನ್ನು ಆರ್ಥಿಕವಾಗಿ, ರಾಜಕೀಯವಾಗಿ ಬಲಗೊಳ್ಳಿಸಲೇ ಬೇಕಾಗಿದೆ.

ಆದ್ದರಿಂದ ಕಾಲ ಉರುಳಿದಂತೆ ಸಂವಿಧಾನ ಮತ್ತು ಲೋಕಾಭಿಪ್ರಾಯದ ಮಧ್ಯ ಹೆಚ್ಚು-ಹೆಚ್ಚು ಘರ್ಷಣೆ ಉಂಟಾಗುವ ಸಾಧ್ಯತೆಯಿದೆ. ಇಂಥ ಘರ್ಷಣೆ ದೇಶದ ಐಕ್ಯತೆಗೆ, ಆಂತರಿಕ ಶಾಂತಿಗೆ ಭಂಗವಾಗದಂತೆ ಸಂವಿಧಾನದ ಶುದ್ಧೀಕರಣ ಮತ್ತು ಪ್ರಜಾಪ್ರಭುತ್ವದ ಶುದ್ಧೀಕರಣ ಜೊತೆಯಲ್ಲಿ ಹೇಗೆ ನಡೆಯಲು ಸಾಧ್ಯ ಮತ್ತು ನಡೆಯುವಂತೆ ಮಾಡಲು ಸಾಧ್ಯ ಎಂಬ ಪ್ರಯೋಗವನ್ನು ಭಾರತೀಯರು ಮಾಡಬೇಕಿದೆ. ಇದು ಭಾರತದ ಮುಂದೆ ಇರುವ ೨೧ನೇ ಶತಮಾನದ ಸವಾಲು, ಮತ್ತು ಒಂದು ಆಹ್ವಾನ. ಅಣ್ಣಾ ಹಜಾರೆಯವರ ಹೋರಾಟ ಭ್ರಷ್ಟಾಚಾರವನ್ನು ಎಷ್ಟರ ಮಟ್ಟಿಗೆ ನಿರ್ಮೂಲನಗೊಳಿಸಲು ಸಮರ್ಥವಾಗುತ್ತದೆಂಬುದನ್ನು ಮುಂಬರುವ ಅನುಭವ ತಿಳಿಸುತ್ತದೆ. ಆದರೆ ಅವರ ಹೋರಾಟವಂತೂ ದೇಶವನ್ನು ಹೊಸ ತಿರುವಿನಲ್ಲಿ ನಿಲ್ಲಿಸಿರುವುದಂತೂ ಸತ್ಯ.

* * *

ನಾಯಕನೆಂಬುವನು ನಂಬಿಕೆಗೆ ಅರ್ಹನಾಗಿರಬೇಕು. ಅವನು ಎಲ್ಲ ಕಾಲದಲ್ಲಿಯೂ ಸುಲಭವಾಗಿ ಸಿಗುವಂಥವನಿರಬೇಕು. ಮುಖ್ಯವಾಗಿ ತುರ್ತುಸಮಯದಲ್ಲಿ. ತನ್ನ ನಂಬಿಕಾರ್ಹತೆಯನ್ನು ಪ್ರಕಟಗೊಳಿಸಲು ಅವನು ಪಕ್ಷಾತೀತನಾಗಿರಬೇಕು. ನಡತೆಯಲ್ಲಿ ಮಾದರಿಯಾಗಿರಬೇಕು ಮತ್ತು ಪೂರ್ಣ ಆತ್ಮವಿಶ್ವಾಸ ನಡೆ-ನುಡಿಯುಳ್ಳವನಾಗಿರಬೇಕು. ಸತ್‌ಚಾರಿತ್ರ್ಯವೇ ತಕ್ಕಡಿಯಲ್ಲಿ ಬಹಳ ಭಾರವಾಗಿ ತೂಗುವಂಥದು. ಉಪಯೋಗಕಾರಿಯಾದ ನಾಯಕನಾಗಲು ಅವನು ಸುಸಂಘಟಿತನಾಗಿರಬೇಕು, ವಿಚಾರವಂತನಾಗಿರಬೇಕು ಮತ್ತು ಸಹೋದ್ಯೋಗಿಗಳಿಗೆ ಅಧಿಕಾರವನ್ನು ಹಸ್ತಾಂತರಿಸಬೇಕು. ಇವು ಯಶಸ್ಸಿನ ಬೀಗದ ಕೈಗಳು. - ಅನಾಮಿಕ

ಜೈ ಜವಾನ್ ಜೈ ಕಿಸಾನ್

- ಪ್ರೊ. ಬಿ.ಆರ್.ಪ್ರಾಣೇಶ್‌ರಾವ್

(ಅಕ್ಟೋಬರ್ ಎರಡು ಲಾಲ್‌ಬಹಾದ್ದೂರ್ ಶಾಸ್ತ್ರೀಯವರ ಜನ್ಮದಿನದ ನೆನಪಿನಲ್ಲಿ ಈ ಲೇಖನ.)

ಇಪ್ಪತ್ತೆರಡು ದಿನಗಳು ನಡೆದ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಭಾರತವು ತನ್ನ ಸತ್ವಪರೀಕ್ಷೆಯಲ್ಲಿ ಗೆದ್ದಿತು. ರಾಷ್ಟ್ರದ ಸ್ವಾತಂತ್ರ್ಯ ಮತ್ತು ಸಮಗ್ರತೆಗೆ ಸಂಚುಬಂದರೆ ಭಾರತದ ಜನರು ಒಗ್ಗಟ್ಟಾಗಿ ಹೋರಾಡುವರೆಂಬುದು ಲೋಕಕ್ಕೆಲ್ಲ ವ್ಯಕ್ತವಾಯಿತು. ಭಾರತೀಯ ರಕ್ಷಣಾಪಡೆಗಳ ಸಾಮರ್ಥ್ಯವನ್ನು ಪ್ರಪಂಚವು ಮತ್ತೊಮ್ಮೆ ಪರಿಚಯ ಮಾಡಿಕೊಂಡಿತು.

ಭಾರತೀಯ ಸೈನಿಕರು ಹಿಂದೆ ಪ್ರಥಮ ಮತ್ತು ದ್ವಿತೀಯ ಮಹಾಯುದ್ಧಗಳಲ್ಲಿ ಮಹಾ ಪರಾಕ್ರಾಮವನ್ನು ಪ್ರದರ್ಶಿಸಿದ್ದು ಯುದ್ಧಕೌಶಲ್ಯದಲ್ಲಿ ಪ್ರಪಂಚದ ಯಾವುದೇ ಅಗ್ರ ರಾಷ್ಟ್ರಗಳ ಸೈನಿಕರಿಗೆ ಅವರು ಕಡಿಮೆ ಇಲ್ಲವೆಂದು ಖ್ಯಾತಿಗಳಿಸಿದ್ದರು. ಆದರೆ ದುರದೃಷ್ಟವಶಾತ್ ೧೯೬೨ರಲ್ಲಿ ಚೀಣೀಯರು ಹಿಮಾಲಯದ ದುರ್ಗಮ ಗಡಿ ಪ್ರದೇಶಗಳಲ್ಲಿ ಆಕ್ರಮಣ ನಡೆಸಿದಾಗ ಭಾರತೀಯ ಸೈನಿಕರು ತೇಜೋವಧೆಯನ್ನು ಅನುಭವಿಸಬೇಕಾಯಿತು. ಇದಕ್ಕೆ ಕಾರಣಗಳು ಅನೇಕವಿದ್ದರೂ ಭಾರತೀಯ ಸೈನಿಕರ ಕ್ಷಾತ್ರ ಸಾಮರ್ಥ್ಯಕ್ಕೆ ಕಳಂಕವೊದಗಿದ್ದಿತು. ಆದರೆ ೧೯೬೫ರ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಭಾರತ-ಪಾಕಿಸ್ತಾನದ ಯುದ್ಧದಲ್ಲಿ ಭಾರತೀಯ ರಕ್ಷಣಾ ಪಡೆಗಳ ನಾಯಕರುಗಳು ರಚಿಸಿದ ಸಮರವ್ಯೂಹ ಹಾಗೂ ಸೈನಿಕರು ಪ್ರದರ್ಶಿಸಿದ ಪರಾಕ್ರಮದಿಂದಾಗಿ ಭಾರತೀಯ ರಕ್ಷಣಾ ಪಡೆಗಳ ಕೀರ್ತಿ ಮತ್ತೊಮ್ಮೆ ಪ್ರತಿಷ್ಠಿತವಾಯಿತು. ಪಾಕಿಸ್ತಾನವು ಅತ್ಯಂತ ಆಧುನಿಕ ಶಸ್ತ್ರಾಸ್ತ್ರಗಳನ್ನೂ, ಟ್ಯಾಂಕುಗಳನ್ನೂ, ಇತರ ಸಾಮಗ್ರಿಗಳನ್ನೂ ಹೊಂದಿತ್ತು. ನಿಜ. ಆದರೆ ಯುದ್ಧದ ಆಗುಹೋಗುಗಳು ಕೇವಲ ಆಧುನಿಕ ಶಸ್ತ್ರಾಸ್ತ್ರಗಳನ್ನೇ ಅವಲಂಬಿಸಿರುವುದಿಲ್ಲವೆಂಬುದು ಈ ಯುದ್ಧದಿಂದ ಸ್ಪಷ್ಟವಾಯಿತು. ಶಸ್ತ್ರಾಸ್ತ್ರಗಳು ಹಾಗೂ ಇತರ ಸಾಧನಗಳು ಎಷ್ಟೇ ಸಾಮಾನ್ಯ ದರ್ಜೆಯದಾಗಿರಲಿ ಅವುಗಳನ್ನು ಉಪಯೋಗಿಸುವ ಯೋಧರು ಸಾಹಸಿಗಳಾಗಿದ್ದರೆ ಹಾಗೂ ನಿಪುಣರಾಗಿದ್ದರೆ ವಿಜಯಗಳಿಸುವುದು ಸಾಧ್ಯವೆನ್ನುವುದನ್ನು ಭಾರತೀಯ ಯೋಧರು ತೋರಿಸಿಕೊಟ್ಟರು. ಭಾರತೀಯ ಸೇನಾ ಪಡೆಗಳ ಅಪ್ರತಿಮ ಸಾಹಸದ ಫಲವಾಗಿ ಭಾರತೀಯ ಸೈನ್ಯದ ಕೀರ್ತಿ ಹೆಚ್ಚಿದ್ದಷ್ಟೇ ಅಲ್ಲ, ಭಾರತವು ಸ್ವತಂತ್ರ ರಾಷ್ಟ್ರವಾಗಿ ತಲೆ ಎತ್ತಿಕೊಂಡು ನಿಲ್ಲುವಂತಾಯಿತು. ಆದ್ದರಿಂದಲೇ ಭಾರತದ ಜನ ಮುಕ್ತಕಂಠದಿಂದ ಸೈನಿಕರನ್ನು ಹೊಗಳಿದ್ದಲ್ಲದೆ ಅವರ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸಿದರು.

ಪ್ರಧಾನಿ ಶಾಸ್ತ್ರಿಯವರು ಸೆಪ್ಟೆಂಬರ್ ೨೩ ರಂದು ರಾತ್ರಿ ರಾಷ್ಟ್ರವನ್ನುದ್ದೇಶಿಸಿ ಬಾನುಲಿಯ ಮೂಲಕ ಭಾಷಣ ಮಾಡುತ್ತಾ ಈ ರೀತಿ ತಿಳಿಸಿದರು. "ನಮ್ಮ ದೇಶದ ಸಶಸ್ತ್ರಪಡೆಗಳು ಈ ಸಂದರ್ಭದಲ್ಲಿ ಕೀರ್ತಿಯನ್ನು ಎತ್ತಿಹಿಡಿದಿದ್ದಾರೆ. ಅಪೂರ್ವ

ಸಾಹಸ ಹಾಗೂ ಸಮರ ಕೌಶಲ್ಯವನ್ನು ಅವರು ತೋರಿದ್ದಾರೆ. ನಮ್ಮ ಭೂಸ್ಯೆ ಹಾಗೂ ವಿಮಾನದಳದ ವೀರ ಯೋಧರು ಐಕೀಭವಿಸಿ ಕಾರ್ಯಚರಣೆ ನಡೆಸಿದ್ದಾ ಸೇನಾಧಿಕಾರಿಗಳು ಸಮರದ ಮುಂಚೂಣಿಯಲ್ಲಿದ್ದು ಸೇನೆಗಳನ್ನು ನಡೆಸಿದ್ದಾ ಜೀವದ ಹಂಗು ತೊರೆದು ಹೋರಾಡಿದ್ದಾರೆ. ಪರಾಕ್ರಮ ಕಾರ್ಯಗಳ ಅನೇಕ ವರದಿಗಳ ಸಮರರಂಗದಿಂದ ಬಂದಿವೆ. ನಮ್ಮ ಯೋಧರ ಬಗ್ಗೆ ಇಡೀ ದೇಶವು ಮೆಚ್ಚುಗೆಯ ಹಾಗೂ ಕೃತಜ್ಞತಾಪೂರ್ವಕ ಭಾವನೆಯನ್ನು ಹೊಂದಿದೆ."

ಲಾಲ್‌ಬಹಾದೂರರು ಭಾಗವಹಿಸಿದ ಸಮಾರಂಭಗಳಲ್ಲೆಲ್ಲಾ ದೇಶದ ಮುಂದಿರುವ ಎರಡು ಮುಖ್ಯಗುರಿಗಳನ್ನು ಸ್ಪಷ್ಟ ಪಡಿಸುತ್ತಾ ಹೋದರು. ಅವು ಯಾವುವೆಂದರೆ, ದೇಶದ ರಕ್ಷಣೆ ಹಾಗೂ ಸ್ವಾವಲಂಬನೆ, ಇವೆರಡು, ಲಾಲ್‌ಬಹಾದೂರರು ಜಪಿಸಿದ ಮಂತ್ರಗಳು. ರಾಷ್ಟ್ರದ ರಕ್ಷಣೆಯಲ್ಲಿ ರಕ್ಷಣಾ ದಳದವರ ಪಾತ್ರ ಅಪಾರವಾದುದು. ಅವರ ಸಾಹಸ ಹಾಗೂ ತ್ಯಾಗ ಮನೋಭಾವಕ್ಕೆ ದೇಶವು ಸದಾ ಕೃತಜ್ಞವಾಗಿರಬೇಕು. ಅವರ ಬಗ್ಗೆ ಹೆಮ್ಮೆ ತಾಳಬೇಕು. ತಮ್ಮ ಸಾಹಸಕ್ಕೆ ಜನ ಮೆಚ್ಚುತ್ತಾರೆನಿಸಿದರೆ, ತಮ್ಮ ತ್ಯಾಗಕ್ಕೆ ಬೆಲೆಯಿದೆಯೆಂದು ಮನವರಿಕೆಯಾದರೆ ಸೈನ್ಯದಳದವರ ಮನೋದಾರ್ಢ್ಯ ಹಾಗೂ ಸಾಹಸಶೀಲತೆ ನೂರ್ಮಡಿ ಆಗುತ್ತದೆ. ಆದ್ದರಿಂದಲೇ ಲಾಲ್‌ಬಹಾದೂರರು 'ಜೈ ಜವಾನ್' ಎಂದು ಘೋಷಣೆ ಮಾಡಿದರು. ದೇಶಾದ್ಯಂತ "ಜೈ ಜವಾನ್" ಕೂಗು ಪ್ರತಿಧ್ವನಿತವಾಯಿತು.

ದೇಶದ ರಕ್ಷಣೆಯ ಜವಾಬ್ದಾರಿ ಸೈನ್ಯದಳದವರಿಗೆ ಸೇರಿದ್ದಾದರೂ ರಕ್ಷಣಾ ವ್ಯವಸ್ಥೆಗೆ ಆರ್ಥಿಕ ಪುಷ್ಟಿ ಇರಬೇಕು. ಅರ್ಥಾತ್ ಮೂಲ ಆರ್ಥಿಕ ಅಗತ್ಯತೆಗಳ ಬಗ್ಗೆ ದೇಶವು ಸ್ವಾವಲಂಬಿಯಾಗಿರಬೇಕು. ಲಷ್ಕರಿ ಸಾಮಗ್ರಿಗಳ ತಯಾರಿಕೆಯಲ್ಲೂ, ಮೂಲ ಕೈಗಾರಿಕಾವಸ್ತುಗಳ ತಯಾರಿಕೆಯಲ್ಲೂ ದೇಶವು ತನ್ನನ್ನೇ ತಾನು ಅವಲಂಬಿತವಾಗಬೇಕು. ಹಾಗಿಲ್ಲದಿದ್ದರೆ ಸಂಕಷ್ಟ ಸಮಯದಲ್ಲಿ ಹೊರ ದೇಶಗಳಿಂದ ಅಗತ್ಯವಸ್ತುಗಳ ಸರಬರಾಜು ಆಗದೆ ಜನ ಜೀವನ ಅಸ್ತವ್ಯಸ್ತವಾಗುತ್ತದೆ. ರಕ್ಷಣೆಮಾತು ಬಾಯಿಮಾತಾಗುತ್ತದೆ. ಇದನ್ನು ಈಚಿನ ಯುದ್ಧಕಾಲದ ಅನುಭವದಿಂದ ಅರಿತ ಪ್ರಧಾನಿ ಲಾಲ್‌ಬಹಾದೂರರು ದೇಶವು ಸ್ವದೇಶಿ ವ್ರತವನ್ನು ಕೈಗೊಳ್ಳಬೇಕೆಂದು ತಿಳಿಸಿದರು. ಕೈಗಾರಿಕೆಗಳು ಆದಷ್ಟು ಮಟ್ಟಿಗೆ ಆಮದಿನ ಮೇಲೆ ಅವಲಂಬಿಸದೆ ದೇಶದಲ್ಲಿ ಸಿಕ್ಕುವ ವಸ್ತುಗಳನ್ನೇ ಉಪಯೋಗಿಸಬೇಕೆಂದರು.

ದೇಶದ ರಕ್ಷಣೆಗೆ ಸೈನಿಕ-ಜವಾನ್; ಬೆನ್ನು ಮೂಳೆಯಾದರೆ, ರೈತ-ಕಿಸಾನ್; ಆರ್ಥಿಕ ವ್ಯವಸ್ಥೆಯ ಬೆನ್ನುಮೂಳೆ. ದೇಶದ ರಕ್ಷಣೆ ಹಾಗೂ ಆರ್ಥಿಕಾಭಿವೃದ್ಧಿಯ ಗುರಿಹೊಂದಿರುವ ಭಾರತ ಸೈನಿಕನಿಗೂ ರೈತನಿಗೂ ಸಮಾನವಾದ ಪ್ರಾಧಾನ್ಯತೆಯನ್ನು ಕೊಡಬೇಕು. ಭಾರತದ ರೈತವರ್ಗ ಭಾರತೀಯ ಸಮಾಜದ ಸ್ಥಿರತೆಗೆ ಬುನಾದಿ ಆಗಿದೆ. ಈ ಬುನಾದಿ ಬಲವಾಗಿದ್ದರೆ ಭಾರತೀಯ ಸಮಾಜ ಎಂದೆಂದಿಗೂ ಸುಭದ್ರ. ನಮ್ಮ ರೈತರು ದೇಶದ ಆಹಾರ ವಸ್ತುಗಳ ಅಗತ್ಯತೆಯಲ್ಲಿ ಶೇಕಡ ೯೫ ರಷ್ಟು ಪೂರೈಸುತ್ತಿದ್ದಾರೆ. ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ವಸ್ತುಗಳನ್ನು ಸರಬರಾಜು ಮಾಡುತ್ತಾರೆ. ಭಾರತದ ರಫ್ತು ವ್ಯಾಪಾರದಲ್ಲಿ ಮುಕ್ಕಾಲುಪಾಲು ಕೃಷಿ ಉತ್ಪನ್ನಗಳೇ ಸೇರಿವೆ. ರಾಷ್ಟ್ರೀಯ ಆದಾಯಕ್ಕೆ ರೈತರು ಕೂಡಿಸುವ ಭಾಗ ಶೇಕಡ ಐವತ್ತರಷ್ಟಾಗುತ್ತದೆ. ಆದುದರಿಂದಲೇ

ರೈತರು ಭಾರತದ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬೆನಿಸಿದ್ದಾರೆ. ಸಾಮಾಜಿಕವಾಗಿ ಅವರು ಭಾರತೀಯ ಸಮಾಜದ ಭದ್ರತೆಗೆ ಕಾರಣರಾಗಿದ್ದಾರೆ. ಸೈನ್ಯದಳದಲ್ಲಿ ಹೋರಾಡುವ ಸಿಪಾಯಿಗಳೆಲ್ಲಾ ಮುಕ್ಕಾಲು ಮೂರು ವೀಸೆ ಪಾಲು ರೈತವರ್ಗದಿಂದ ಬಂದವರೇ ಆಗಿರುತ್ತಾರೆ. ರಾಜಕೀಯವಾಗಿ ಸಹ ಸ್ವತಂತ್ರ ಭಾರತದಲ್ಲಿ ರೈತರ ಸ್ಥಾನ ಪ್ರಾಮುಖ್ಯವಾದದ್ದು. ದೇಶದ ಜನರಲ್ಲಿ ಅಧಿಕ ಸಂಖ್ಯೆಯಲ್ಲಿರುವ ರೈತರು ನಮ್ಮ ಪ್ರಜಾ ಪ್ರಭುತ್ವದಲ್ಲಿ ನಿರ್ಣಾಯಕಸ್ಥಾನ ಪಡೆದಿದ್ದಾರೆ. ಈ ಜನರಿಗೆ ತಿಳುವಳಿಕೆ ನೀಡಿ, ಅವರ ಕ್ರಿಯಾಶಕ್ತಿಯನ್ನು ಹೆಚ್ಚಿಸಿದಲ್ಲಿ ದೇಶದ ಆರ್ಥಿಕ ಸ್ವಾವಲಂಬನೆಗೆ ಹಾದಿ ಸುಗಮವಾಗುತ್ತದೆ.

ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತದಿಂದ ಪ್ರಭಾವಿತರಾದ ಸೋಷಲಿಸ್ಟರೆನಿಸಿಕೊಂಡಿರುವ ಮಂದಿ ಎಲ್ಲೆಲ್ಲಿಯೂ ರೈತ ಸಮಾಜಕ್ಕೆ ಅಪಚಾರ ಬಗೆದಿದ್ದಾರೆ. ಅವರ ದೃಷ್ಟಿಯಲ್ಲಿ ಕೈಗಾರಿಕಾ ಕಾರ್ಮಿಕನಿಗೆ ಅಗ್ರಪೂಜೆ. ಸಮಾಜವಾದದ ಧ್ಯೇಯವಿಟ್ಟುಕೊಂಡಿರುವ ಭಾರತವು ರೈತನ ಸ್ಥಾನವನ್ನು ಕಡೆಗಣಿಸಬಾರದು. ಈ ದೃಷ್ಟಿಯಿಂದ ನೋಡಿದರೆ ಲಾಲ್‌ಬಹಾದೂರರು 'ಜೈಕಿಸಾನ್' ಎಂಬ ಉದ್ಗಾರವನ್ನು ಮುಂದಿಟ್ಟು ಉಪಕಾರ ಮಾಡಿದ್ದಾರೆ. ವೈಚಾರಿಕ ಪ್ರಪಂಚ ಇದರ ಹಿಂದಿರುವ ಗಹನ ತತ್ತ್ವವನ್ನು ಅರಿಯುವುದು ಅಗತ್ಯವಾಗಿದೆ. ಲಾಲ್‌ಬಹಾದೂರರು ನೀಡಿದ 'ಜೈಜವಾನ್-ಜೈಕಿಸಾನ್' ಸಂದೇಶ ಕೇವಲ ಸಮರ ಕಾಲದ ಭಾವೋದ್ರಿಕ್ತ ಘೋಷಣೆಯಾಗಿರದೆ ದೀರ್ಘಕಾಲದ ವೈಚಾರಿಕ ಸಂದೇಶವಾಗಿರುತ್ತದೆ.

ಯುದ್ಧ ಸ್ತಂಭನದ ನಂತರ ಪ್ರಧಾನಿ ಶಾಸ್ತ್ರಿಯವರು ದೇಶದ ವಿವಿಧ ಭಾಗಗಳಲ್ಲಿ ಪ್ರವಾಸ ಕೈಗೊಂಡರು. ಅವರು ಹೋದೆಡೆಯೆಲ್ಲೆಲ್ಲಾ ಲಕ್ಷ ಲಕ್ಷಗಟ್ಟಲೆ ಜನಸ್ತೋಮ ನೆರೆದು ನೆಚ್ಚಿನ ನಾಯಕನ ಸಂದೇಶ ಕೇಳಿದರು. ರಾಷ್ಟ್ರವನ್ನು ಸಂಕಷ್ಟ ಪರಿಸ್ಥಿತಿಯಿಂದ ಪಾರುಮಾಡಿ ಜನರಲ್ಲಿ ಆತ್ಮವಿಶ್ವಾಸವು ಅಂಕುರಿಸುವಂತೆ ಮಾಡಿದ ಲಾಲ್‌ಬಹಾದೂರರರನ್ನು ಜನತೆ ಆರಾಧಿಸಲು ಆರಂಭಿಸಿತು; ಹಿಂದೆ ಗಾಂಧೀಜಿ ಮತ್ತು ನೆಹರೂರವರು ಭಾಷಣಮಾಡುತ್ತಿದ್ದಾಗ್ಗೆ ಯಾವ ರೀತಿಯ ಜನಸಂದಣಿ ಸೇರುತ್ತಿತ್ತೋ, ಅದೇ ಪ್ರಮಾಣದಲ್ಲಿ ಲಾಲ್‌ಬಹಾದೂರರ ಸಭೆಗಳಲ್ಲೂ ಇರುತ್ತಿತ್ತು.

ಪ್ರಧಾನಿ ಲಾಲ್‌ಬಹಾದೂರರು ದೇಶದ ಆಂತರಿಕ ಶಕ್ತಿಯನ್ನು ಸಂಘಟಿಸಲು ಮತ್ತು ವಿದೇಶಗಳಲ್ಲಿ ಭಾರತ ಸರ್ಕಾರದ ನೀತಿಯನ್ನು ನಿಚ್ಚಳವಾಗಿ ತಿಳಿಸಲು ಕಾರ್ಯಕ್ರಮ ಕೈಗೊಂಡರು. ನಾಲ್ಕನೇ ಪಂಚವಾರ್ಷಿಕ ಯೋಜನೆಯ ರೂಪರೇಖೆಗಳಿಗೆ ತಮ್ಮ ಒಪ್ಪಿಗೆಯಿತ್ತು, ಅದು ರಕ್ಷಣೆ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಗುರಿಗಳನ್ನು ಹೊಂದಿರಬೇಕೆಂದು ನಿರ್ದೇಶಿಸಿದರು. ರಾಷ್ಟ್ರೀಯ ರಕ್ಷಣಾ ನಿಧಿಗೆ ಬಂಗಾರ ಮತ್ತು ಹಣವನ್ನು ಸಂಗ್ರಹಿಸಲು ತಮ್ಮ ವೈಯುಕ್ತಿಕ ವರ್ಚಸ್ಸನ್ನು ಬೀರಿದರು.

ವಿದೇಶಗಳಲ್ಲಿ ಕಾಶ್ಮೀರ ಸಮಸ್ಯೆಯ ಸಂಬಂಧವಾಗಿ ಸಾಕಷ್ಟು ತಿಳುವಳಿಕೆ ಇಲ್ಲವೆಂದು ತಿಳಿದು ಆ ದೇಶಗಳಲ್ಲಿ ಸಾರ್ವಜನಕರಿಗೆ ಹಾಗೂ ಸರ್ಕಾರಗಳಿಗೆ ಭಾರತ ಸರ್ಕಾರದ ನಿಲುವನ್ನು ತಿಳಿಸಲು ನಿಯೋಗಗಳನ್ನು ಕಳುಹಿಸಿದರು. ಈ ನಿಯೋಗಗಳಲ್ಲಿ ಭಾರತದ ಎಲ್ಲಾ ರಾಜಕೀಯ ಪಕ್ಷಗಳ ವಿಚಾರವಂತ ರಾಜಕಾರಣಿಗಳೂ ಇದ್ದರು. ಇದರಿಂದಾಗಿ ವಿದೇಶಗಳಲ್ಲಿ ಭಾರತ ಸರ್ಕಾರದ ನೀತಿಯನ್ನು ಇನ್ನೂ ಸ್ಪಷ್ಟಪಡಿಸಲು ಸಾಧ್ಯವಾಯಿತು.

ಭಾರತ–ಪಾಕಿಸ್ತಾನ ಯುದ್ಧ ಸಮಯದಲ್ಲಿ ಅಮೆರಿಕಾ, ಬ್ರಿಟನ್ ಮತ್ತಿತರ 'ಮಿತ್ರರಾಷ್ಟ್ರಗಳು' ಭಾರತದ ಬಗ್ಗೆ ತಾಳಿದ ನೀತಿಯು ವಿಚಿತ್ರವೂ ಅಸಹನೀಯವೂ ಆಗಿದ್ದಿತು. ಅಮೆರಿಕಾ ಸರ್ಕಾರವು ಆಕ್ರಮಣಕ್ಕೊಳಗಾದ ಭಾರತವನ್ನೂ ಆಕ್ರಮಣ ಮಾಡಿದ ಪಾಕಿಸ್ತಾನವನ್ನೂ ಒಂದೇ ತಕ್ಕಡಿಯಲ್ಲಿ ಇಟ್ಟು ಎರಡು ದೇಶಗಳಿಗೂ ಆರ್ಥಿಕಸಹಾಯವನ್ನೂ, ಮಿಲಿಟರಿ ಸಾಮಗ್ರಿಗಳ ಸರಬರಾಜನ್ನೂ ನಿಲ್ಲಿಸಿತು. ಬ್ರಿಟಿಷ್ ಸರ್ಕಾರವು ಪೂರ್ಣವಾಗಿ ಪಾಕಿಸ್ತಾನದ ಪರವಾಗಿಯೇ ನಿಂತಿತು. ಪಾಕಿಸ್ತಾನವು ಆಗಸ್ಟ್ ಐದರಂದು ಕಾಶ್ಮೀರದಲ್ಲಿ ಅತಿಕ್ರಮಣಕಾರರನ್ನು ಕಳುಹಿಸಿ ಸೆಪ್ಟೆಂಬರ್ ಒಂದರಂದು ಛಂಬ್ ಪ್ರದೇಶದಲ್ಲಿ ಭಾರಿ ಯುದ್ಧವನ್ನೇ ಆರಂಭಿಸಿದರೂ ಬ್ರಿಟಿಷ್ ಸರ್ಕಾರವು ಒಂದು ಮಾತನ್ನೂ ಆಡಲಿಲ್ಲ. ಆದರೆ ರಕ್ಷಣಾ ದೃಷ್ಟಿಯಿಂದ ಪಡೆಗಳು ಲಾಹೋರ್ ವಲಯಕ್ಕೆ ಪ್ರವೇಶಮಾಡಿದಾಗ ಬ್ರಿಟನ್‌ನ ಪ್ರಧಾನಿ ಭಾರತದ ವಿರುದ್ಧ ಬೊಬ್ಬೆಯಿಟ್ಟರು. ಭಾರತವೇ ಆಕ್ರಮಣ ನಡೆಸಿದೆಯೆಂದು ಆರೋಪಿಸಿದರು. ಉಳಿದ ಅನೇಕ ರಾಷ್ಟ್ರಗಳು ತಟಸ್ಥವಾಗಿದ್ದವು. ಮಲೇಷ್ಯ, ಸಿಂಗಪುರ್ ಮತ್ತು ಸೈಪ್ರಸ್ ಸ್ಪಷ್ಟವಾಗಿ ಭಾರತದ ನಿಲುವನ್ನು ಸಮರ್ಥಿಸಿದವು.

ಸಂಕಷ್ಟ ಸಮಯದಲ್ಲಿ ವಿದೇಶಗಳು ಭಾರತದ ಬಗ್ಗೆ ತಾಳಿದ ಧೋರಣೆಯಿಂದಾಗಿ ಭಾರತ ಸರ್ಕಾರದ ವಿದೇಶಾಂಗ ನೀತಿಯನ್ನು ಪುನರ್ ವಿಮರ್ಶಿಸಬೇಕೆಂಬ ಕೂಗು ಎದ್ದಿತು. ಭಾರತವು ಕಾಮನ್‌ವೆಲ್ತ್ ಕೂಟದಿಂದ ಹೊರ ಬರಬೇಕೆಂಬ ಒತ್ತಾಯ ಬಂತು. ಪ್ರಧಾನಿ ಶಾಸ್ತ್ರೀಯವರು ವಿದೇಶಗಳೊಡನೆ ಭಾರತದ ಸಂಬಂಧವನ್ನು ಕುದುರಿಸುವ ಬಗ್ಗೆ ಹೊಸ ವಿಧಾನಗಳನ್ನು ಕೈಗೊಂಡರಾದರೂ ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳಾದ ಅಲಿಪ್ತ ನೀತಿ ಹಾಗೂ ಶಾಂತಿಯತ ಸಹ ಬಾಳ್ವೆಯ ತತ್ವಗಳನ್ನು ಕೈಬಿಡಲು ಒಪ್ಪಲಿಲ್ಲ. ಮುಖ್ಯವಾಗಿ ಫ್ರಾನ್ಸ್ ಜಪಾನ್ ಮುಂತಾದ ದೇಶಗಳೊಡನೆ ಇನ್ನೂ ಹೆಚ್ಚಿನ ಮೈತ್ರಿ ಹಾಗೂ ಸಹಕಾರವನ್ನು ಬೆಳೆಸುವ ಬಗ್ಗೆ ತೀವ್ರ ಗಮನ ಕೊಟ್ಟರು. ಚೀಣಾದ ಬಗ್ಗೆ ದಿಟ್ಟ ನೀತಿಯನ್ನು ತಾಳಿ ಅದು ಆಕ್ರಮಣ ನಡೆಸಿದರೆ ಭಾರತವು ಯಶಸ್ವಿಯಾಗಿ ಎದುರಿಸುವುದಾಗಿ ಘೋಷಿಸಿದರು. ಸಿಕ್ಕಿಂ ಮುಂತಾದ ಆಯಕಟ್ಟಿನ ಪ್ರದೇಶಗಳಲ್ಲಿ ಭಾರತೀಯ ಪಡೆಗಳನ್ನು ಸಜ್ಜುಗೊಳಿಸಿ ಚೀಣೀಯರ ಬೆದರಿಕೆಗಳನ್ನು ಖಂಡಿಸಿದರು. ಭಾರತ–ಪಾಕಿಸ್ತಾನ ಯುದ್ಧ ಸಮಯದಲ್ಲಿ ಚೀಣಾ ಕೊಟ್ಟಿದ್ದ 'ಅಂತಿಮ ಎಚ್ಚರಿಕೆ'ಗೆ ಶಾಸ್ತ್ರಿಯವರು ಸೊಪ್ಪು ಹಾಕಲಿಲ್ಲಿ. ಯುದ್ಧ ಸ್ತಂಭನವಾದ ಮೇಲೆ ಚೀಣಾವು ಪ್ರಕಟಣೆಯೊಂದನ್ನು ಹೊರಡಿಸಿ ಸಿಕ್ಕಿಂ ಗಡಿ ಆಚೆ ಭಾರತವು ನಿರ್ಮಿಸಿದ್ದ ಮಿಲಿಟರಿ ಕಟ್ಟಡಗಳನ್ನು ಭಾರತೀಯ ಸೈನಿಕರು ಕೆಡವಿಹಾಕಿದ್ದಾರೆಂದು ಹೇಳಿತು! ಈ ಪ್ರದೇಶದಲ್ಲಿ ಕಟ್ಟೆಗಳೂ ಇರಲಿಲ್ಲ. ಭಾರತೀಯರು ಕೆಡವಲೂ ಇಲ್ಲ. ಇವೆಲ್ಲ ಚೀಣೀಯರ ಕ್ಷುಲ್ಲಕ ಕಲಹ ನೀತಿಯ ಪ್ರದರ್ಶನವಷ್ಟೆ. ಇದರಿಂದಾಗಿ ಲೋಕದ ಮುಂದೆ ಚೀಣಾದ ಮುಖಭಂಗವಾಯಿತು. ಶಾಸ್ತ್ರಿಯವರ ದಿಟ್ಟ ನೀತಿಯು ಉತ್ತಮ ಫಲ ನೀಡಿತು.

* * *

ಗಾಂಧೀ ಮತ್ತು ಭೂಮಿ

- ಸುರೇಂದ್ರ ಕೌಲಗಿ

"ದೈತ್ಯ ಬುದ್ಧಿಮತ್ತೆಯಿಂದ ಬದಲಾವಣೆ ತರಬಹುದೆಂಬ ವಿಚಾರವನ್ನು ಸುಧಾರಕರು ಹೊಂದಿರುತ್ತಾರೆ." *- ಬರ್ನಾರ್ಡ್ ಶಾ*

ಇಂದು ಸ್ವತಂತ್ರ ಭಾರತದಲ್ಲಿ ಅನೇಕ ಪ್ರಕಾರದ ಸಮಸ್ಯೆಗಳಿವೆ. ಆ ಸಮಸ್ಯೆಗಳ ಪಟ್ಟಿ ಬಹಳ ದೊಡ್ಡದಾಗಿಯೇ ಇರುತ್ತದೆ. ಸಮಸ್ಯೆಗಳ ಆ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆಯುವ ಸಮಸ್ಯೆ ಭೂ ಸಮಸ್ಯೆ. ೧೯೯೧ರಿಂದ ದೇಶದಲ್ಲಿ ಜಾಗತಿಕರಣ ಪ್ರಾರಂಭವಾಯಿತು. ಜಾಗತಿಕರಣದೊಂದಿಗೆ ಕೈಗಾರಿಕಾ ಕ್ರಾಂತಿಗೆ ವೇಗ ಬಂದಿತು. ಅದರೊಂದಿಗೆ ಪ್ರಾರಂಭವಾಯಿತು ಭೂ ಸಮಸ್ಯೆ. ಈಗ ಭೂ ಸಮಸ್ಯೆ ಬಹಳ ಉಲ್ಬಣಗೊಂಡಿದೆ. ದೇಶದ ಒಂದಲ್ಲ ಒಂದು ಭಾಗದಲ್ಲಿ ಭೂಮಿಯೇ ಕೇಂದ್ರಬಿಂದುವಾಗಿರುವ ಘರ್ಷಣೆ ನಡೆಯುತ್ತಲೇ ಇರುತ್ತದೆ. ವಿಶೇಷ ಸಂಗತಿಯೇನೆಂದರೆ ಪ್ರಚಲಿತ ಭೂ ಸಂಬಂಧ ಘರ್ಷಣೆ ಭೂಮಾಲೀಕ ಮತ್ತು ಗೇಣೀದಾರನ ಮಧ್ಯ ಆಗಿರದೆ ಅದು ರೈತರು ಮತ್ತು ಸರ್ಕಾರದ ಮಧ್ಯ ಉಂಟಾಗುತ್ತಿರುವ ಘರ್ಷಣೆ! ರೈತನ ಭೂ ಪರವಾದ ವಾದ ಬಹಳ ಮಟ್ಟಿಗೆ ಪರಿಸರ ವಿಷಯಕ್ಕೆ ಸಂಬಂಧಿಸಿದ್ದಾಗಿದೆ. ಸರ್ಕಾರದ ವಾದ ಅಭಿವೃದ್ಧಿಗೆ ಸಂಬಂಧಿಸಿದ್ದಾಗಿದೆ. ಈ ಎರಡೂ ವಾದಗಳು ದೇಶವನ್ನು ಒಂದು ತಿರುವಿನಲ್ಲಿ ತಂದು ನಿಲ್ಲಿಸಿದೆ. ಪರಿಸರವೇ ಮುಖ್ಯವೆಂದಾದರೆ, ಅಭಿವೃದ್ಧಿ ಬೇಡವೇ ಎಂಬ ಪ್ರಶ್ನೆ ಹುಟ್ಟುತ್ತದೆ; ಅಭಿವೃದ್ಧಿ ಬೇಕೇ ಬೇಕು ಎಂದಾದರೆ ಪರಿಸರದ ರಕ್ಷಣೆ ಬೇಡವೇ ಎಂಬ ಪ್ರಶ್ನೆ ಹುಟ್ಟುತ್ತದೆ. ದೇಶದ ಪ್ರಗತಿಗೆ ಪರಿಸರದ ರಕ್ಷಣೆಯೂ ಬೇಕು, ಅಭಿವೃದ್ಧಿಯೂ ಬೇಕು ಎಂಬ ತೀರ್ಮಾನಕ್ಕೆ ಬರುವುದಾದರೆ ಆಗ ಈ ವಿವಾದದ ತೀರ್ಮಾನಕ್ಕೆ ನಮಗೆ ಗಾಂಧೀ ಬೇಕಾಗುತ್ತದೆ. "ಜಗತ್ತಿನ ಎಲ್ಲ ಜನರ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯ ಪ್ರಕೃತಿಗಿದೆ; ಆದರೆ ಯಾವೊಬ್ಬ ವ್ಯಕ್ತಿಯ ದುರಾಸೆಯನ್ನು ಪೂರೈಸುವ ಶಕ್ತಿ ಅದಕ್ಕಿಲ್ಲ" ಎಂಬ ಗಾಂಧೀ ಮಾತು ನಮಗೆ ಸಹಕಾರಿಯಾಗುತ್ತದೆ. ನಾವು ಗಾಂಧೀಯವರ ಈ ಸ್ಥೂಲ ಮಾತಿನ ಒಳ ಆಶಯವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇಂದಿನ ಅಭಿವೃದ್ಧಿ ದುರಾಸೆಯನ್ನು ಹೆಚ್ಚಿಸುವ ಉಪಕ್ರಮವಾಗಿದೆ. ದುರಾಸೆ ಕೊಬ್ಬಿದ ಆನೆಯಂತೆ. ತನ್ನ ಮಾರ್ಗದಲ್ಲಿ ಅಡ್ಡಿ ಬರುವುದನ್ನೆಲ್ಲ ಧ್ವಂಸಮಾಡುತ್ತ ಹೋಗುತ್ತದೆ. ಅದಕ್ಕೆ ಯಾವುದೇ ವಿವೇಚನಾ ಶಕ್ತಿ ಇರುವುದಿಲ್ಲ. ಅಂಥ ಆನೆಯ ಸ್ವರೂಪದ್ದಾಗಿದೆ ಇಂದಿನ ಅಭಿವೃದ್ಧಿನೀತಿ. ವಿನಾಶಕಾರಿ ಅಭಿವೃದ್ಧಿ ನೀತಿಗೆ ಸಹಕಾರಿಯಾಗುವಂಥ ಭೂ ಸ್ವಾಧೀನಕ್ಕೆ ಸಂಬಂಧಿಸಿದ ಮಸೂದೆ ದೇಶದ ಮುಂದೆ ಇದೆ. ವಿಷಾದದ

ಸಂಗತಿಯೊಂದು ಇಲ್ಲಿದೆ. ಈಸ್ಟ್ ಇಂಡಿಯಾ ಕಂಪನಿ ಭಾರತದಲ್ಲಿ ರೈಲು ಸಂಚಾರ ಪ್ರಾರಂಭಿಸಿತು. ಆಗ ಅದಕ್ಕೆ ಭೂಮಿ ಬೇಕಾಗಿತ್ತು. ಆದ್ದರಿಂದ ೧೮೧೧ನೇ ಇಸ್ವಿಯಲ್ಲಿ ಭೂಸ್ವಾಧೀನ ಕಾನೂನನ್ನು ಜಾರಿಗೆ ತಂದಿತು. ರೈಲು ಸಂಚಾರ ಪ್ರಾರಂಭಿಸುವುದು ಆ ಕಂಪನಿಯ ಅಭಿಪ್ರಾಯದಲ್ಲಿ ವಸಾಹತು ದೇಶವಾದ ಮತ್ತು ಹಿಂದುಳಿದ ದೇಶವಾದ ಭಾರತದ 'ಅಭಿವೃದ್ಧಿ' ಆಗಿತ್ತು. ವಾಸ್ತವದಲ್ಲಿ ಅದು ದೇಶದ ಪ್ರಕೃತಿ ಸಂಪತ್ತನ್ನು ಎಗ್ಗಿಲ್ಲದೆ ಲೂಟಿಮಾಡುವುದೇ ಆಗಿತ್ತು; ಇಂಗ್ಲೆಂಡಿನಲ್ಲಿ ಪ್ರಾರಂಭವಾಗಿದ್ದ ಕೈಗಾರಿಕಾ ಕ್ರಾಂತಿಗೆ ಕಚ್ಚಾ ಪದಾರ್ಥ ಪೂರೈಸಿ ನೆರವಾಗುವುದಾಗಿತ್ತು; ಅದೇ ಹೊತ್ತಿಗೆ ಭಾರತದಲ್ಲಿಯ ಗ್ರಾಮ ಕೈಗಾರಿಕೆಗಳನ್ನೂ, ಗೃಹಕೈಗಾರಿಕೆಗಳನ್ನೂ ನಾಶಮಾಡುವುದೂ ಆಗಿತ್ತು. ರೈಲು ಮಾರ್ಗ ಈಸ್ಟ್ ಇಂಡಿಯಾ ಕಂಪನಿಗೆ ವರವಾಗಿದ್ದರೆ, ಭಾರತಕ್ಕೆ ಶಾಪವಾಗಿತ್ತು. ಈ ಮಾತನ್ನು ತಿಳಿದಿದ್ದ ಗಾಂಧೀ ತಮ್ಮ 'ಹಿಂದ್ ಸ್ವರಾಜ್' ಪುಸ್ತಕದಲ್ಲಿ "ರೈಲ್ವೆಯ ಕಾರಣದಿಂದಾಗಿಯೇ ಇಂಗ್ಲಿಷರು ಭಾರತದ ಮೇಲೆ ಹಿಡಿತವನ್ನು ಸಾಧಿಸಿದ್ದಾರೆ" ಎಂಬುದಾಗಿ ಬರೆದಿದ್ದಾರೆ. ಗಾಂಧೀಯವರು ರೈಲ್ವೆ ಮಾರ್ಗದ ಬಗ್ಗೆ ಬರೆಯುವ ಹೊತ್ತಿಗೆ ಭಾರತದಲ್ಲಿ ೨೬,೦೦೦ ಮೈಲಿಯಷ್ಟು ರೈಲು ಮಾರ್ಗ ಸಿದ್ಧವಾಗಿಬಿಟ್ಟಿತ್ತು. ರೈಲು ಮಾರ್ಗವನ್ನು ಹಾಕಲು ಪ್ರಾರಂಭಿಸಿದ್ದು ೧೮೫೩ರಲ್ಲಿ. ಗಾಂಧೀಜಿ ಹಿಂದ್ ಸ್ವರಾಜ್ ಬರೆದದ್ದು ೧೯೦೯ರಲ್ಲಿ. ಅಂದರೆ ಕೇವಲ ೧೫೬ ವರ್ಷಗಳ ಅಲ್ಪ ಅವಧಿಯಲ್ಲಿಯೇ ೨೬,೦೦೦ ಮೈಲಿ ರೈಲು ಮಾರ್ಗ ನಿರ್ಮಾಣವಾಗಿತ್ತು! ಇದರಿಂದ ಇಂಗ್ಲಿಷರ ಕೈಗಾರಿಕಾಕರಣದ ಪಿಪಾಸೆಯ ತೀವ್ರತೆ ಅರ್ಥವಾಗುತ್ತದೆ. ಇಂಗ್ಲಿಷರು ೧೮೧೧ರಲ್ಲಿ ಜಾರಿಗೆ ತಂದಿದ್ದ ಭೂಸ್ವಾಧೀನ ಕಾನೂನು ಎಷ್ಟು ದಮನಕಾರಿಯಾಗಿತ್ತೆಂಬುದು ಸಹ ಗೊತ್ತಾಗುತ್ತದೆ. ಆ ಕಾನೂನು ಜಾರಿಗೆ ಬಂದ ೪೨ ವರ್ಷಗಳ ಅವಧಿಯಲ್ಲಿ ಬಹುವಿಸ್ತಾರದ ರೈಲುಮಾರ್ಗ ಜಾಲವನ್ನು ನಿರ್ಮಿಸಲು ಅವರಿಗೆ ಸಾಧ್ಯವಾಯಿತು. ಅಂದರೆ ಪರಿಸರದ ವಿನಾಶ ಎಷ್ಟೊಂದು ವೇಗದಲ್ಲಿ ಆಗಿರುಬಹುದು ಎಂದು ಅರ್ಥವಾಗುತ್ತದೆ. ಇದೆಲ್ಲ ವಿದೇಶಿ ಸರ್ಕಾರದ ಆಡಳಿತದ ಸಂಗತಿಗಳಾದರೆ ೨೦೧೧ರಲ್ಲಿ ನಮ್ಮ ಸರ್ಕಾರದ ಭೂಸ್ವಾಧೀನ ಮಸೂದೆ ಇದಕ್ಕಿಂತ ಭಿನ್ನವಾಗಿಲ್ಲ. ಗಾಂಧೀಯವರು ಚಳುವಳಿ ನಡೆಸುತ್ತಿದ್ದ ಕಾಲದಲ್ಲಿ ಭೂ ಸಮಸ್ಯೆ ಈಗಿನಷ್ಟು ಉಲ್ಬಣಗೊಂಡಿರಲಿಲ್ಲ ಮತ್ತು ಅಷ್ಟೊಂದು ಮಹತ್ವದ್ದೂ ಆಗಿರಲಿಲ್ಲ. ಏಕೆಂದರೆ ದೇಶದ ಕೈಗಾರಿಕರಣ ಪ್ರಾರಂಭವಾಗಿರಲಿಲ್ಲ ಮತ್ತು ದೇಶದ ಜನಸಂಖ್ಯೆ ಕೇವಲ ಮೂವತ್ತುಮೂರು ಕೋಟಿ ಇತ್ತು. ಆಗ ಗಾಂಧೀಯವರ ಏಕೈಕ ಉದ್ದೇಶ ದೇಶಕ್ಕೆ ಸ್ವಾತಂತ್ರ್ಯ ತರುವುದೇ ಆಗಿತ್ತು. ಬೇರೆಲ್ಲಾ ಸಮಸ್ಯೆಗಳು ಸ್ವಾತಂತ್ರೋತ್ತರ ಭಾರತದ ಸಮಸ್ಯೆಗಳು. ಸ್ವತಂತ್ರ ಭಾರತದ ಸರ್ಕಾರ ಆ ಎಲ್ಲ ಸಮಸ್ಯೆಗಳನ್ನು ಸಮಾಜದ ಕಟ್ಟಕಡೆಯ ಮನುಷ್ಯನನ್ನು ಗಮನದಲ್ಲಿರಿಸಿಕೊಂಡು ಪರಿಹರಿಸುವುದೆಂದು ನಿರೀಕ್ಷಿಸಿದ್ದರು, ಆಶಿಸಿದ್ದರು. ಗಾಂಧೀಜಿಯವರ ಪ್ರಕಾರ ವಸಹಾತುಶಾಹಿ ಎಂದರೆ ಇನ್ನೊಬ್ಬರ ಹಕ್ಕಿನ ಭೂಮಿಯನ್ನು ಆಕ್ರಮಿಸುವುದೇ ಆಗಿದೆ; ಅರ್ಥಾತ್ ಪರದೇಶವನ್ನು ತಮ್ಮ ಅಧೀನಕ್ಕೆ ವಶಪಡಿಸಿಕೊಳ್ಳುವುದೇ ಆಗಿದೆ. ಆಗ ಆಕ್ರಮಿತಗೊಂಡ ದೇಶದ

ಜನರು ತಮ್ಮ ಮಾತೃಭೂಮಿಯನ್ನು ಹಿಂದಕ್ಕೆ ಪಡೆಯುವುದು ಅವರ ಜನ್ಮಸಿದ್ಧ ಹಕ್ಕಾಗುತ್ತದೆ. ಇಂಥ ಭಾವನೆಯೊಂದಿಗೆ, ಇಂಥ ಅರ್ಥದೊಂದಿಗೆ ಭಾರತ ದೇಶದ ಸ್ವಾತಂತ್ರಕ್ಕಾಗಿ ಹೋರಾಡಿದರು. ಅಂದರೆ ಭಾರತೀಯರ ಭೂಮಿ ಭಾರತೀಯರಿಗೆ ಸೇರಬೇಕಾದದ್ದು. ಅಷ್ಟೇ ಅಲ್ಲ ನಂತರ ಶೋಷಣೆ ರಹಿತ, ವಿಕೇಂದ್ರಿತ, ಸಮಾನತೆಯ ಮತ್ತು ಸ್ವರಾಜ್ಯದ ಸಮಾಜ ರಚನೆಯಾಗಬೇಕೆಂದು ಬಯುಸಿದ್ದರು. ಈಗ ನಮ್ಮ ಮುಂದೆ ಇರುವ ಪ್ರಶ್ನೆ ೨೦೧೧ನೇ ಇಸವಿಯ ಭೂಸ್ವಾಧೀನ ಮಸೂದೆ ಶಾಸನವಾದ ಮೇಲೆ ಗಾಂಧೀಯವರ ಕಲ್ಪನೆಯ ಮತ್ತು ಆಶಯದ ಸಮಾಜ ರಚನೆಗೆ ಸಾಧಕವಾಗಬಲ್ಲದೇ ಎಂಬುದು. ಪ್ರಸ್ತುತ ಮಸೂದೆ ಗ್ರಾಮಾಧಾರಿತ ದೇಶದ ಏಳಿಗೆಯ ಕಲ್ಪನೆಯ ಬದಲಾಗಿ ಕೇಂದ್ರಿತ ಉದ್ಯೋಗಾಧಾರಿತ, ನಗರಗಳಾಧಾರಿತ ದೇಶದ ಏಳಿಗೆಯ ಉದ್ದೇಶವನ್ನು ಹೊಂದಿರುವಂತೆ ತೋರುತ್ತದೆ. ಸರ್ಕಾರದ ಈ ನೀತಿಯಲ್ಲಿ ಬದಲಾವಣೆಯಾಗಬೇಕಾದದ್ದು ಅಗತ್ಯವೆಂದೆನಿಸುತ್ತದೆ. ಇಷ್ಟೆಲ್ಲಾ ಕೈಗಾರಿಕಾಕರಣದ ನಂತರವೂ ದೇಶದ ಪ್ರಜಾಸಂಖ್ಯೆಯಲ್ಲಿ ನೂರಕ್ಕೆ ೭೦ ರಷ್ಟು ಸಂಖ್ಯೆಯ ಜನರು ಹಳ್ಳಿಗಳಲ್ಲೇ ವಾಸಿಸುತ್ತಾರೆ. ಹಳ್ಳಿಗಳಲ್ಲಿ ಬಡತನವಿದೆ, ನಿರುದ್ಯೋಗವಿದೆ, ಒಂದು ದಿನದ ಪ್ರತಿತಲಾ ಆದಾಯ ಒಂದು ಡಾಲರ್‌ನಷ್ಟಿದೆ. ಕೈಗಾರಿಕಾಕರಣಕ್ಕೆ ಅಗತ್ಯವಾದ ಕೃಷಿ ಕ್ಷೇತ್ರ ಕ್ಷೀಣಗೊಳ್ಳುತ್ತಿದೆ. ಕೃಷಿ ಭೂಮಿ ವಿಸ್ತಾರವೂ ಕಡಿಮೆಯಾಗುತ್ತಿದೆ. ಇವೆಲ್ಲ ಸಮಸ್ಯೆಗಳನ್ನು ಪರಿಹರಿಸದಿದ್ದರೆ ಮುಂದಿನ ಭವಿಷ್ಯ ಆಘಾತಕಾರಿಯಾಗಿರುತ್ತದೆ. ಭೂಮಿಯನ್ನು ಕಳೆದುಕೊಂಡವರ ಪುನರ್ವಸತಿಯ ಸಮಸ್ಯೆಯು ಅಗಾಧವಾಗಿರುತ್ತದೆ. ಈ ಸಂದರ್ಭದಲ್ಲಿ ಗಾಂಧೀಯವರು ಭೂಮಿಯ ಬಗ್ಗೆ ಹೇಳಿದ ಮಾತನ್ನು ಸ್ಮರಿಸಿಕೊಳ್ಳಬೇಕಾದದ್ದು ಅನಿವಾರ್ಯವೆನಿಸುತ್ತದೆ, "ಭೂರಹಿತ ಕಾರ್ಮಿಕನಾಗಿಯಾಗಲಿ ಅಥವಾ ತಾನೇ ದುಡಿಯುವ ಮಾಲೀಕನಾಗಿಯಾಗಲಿ ಅಥವಾ ರೈತನಾಗಿಯಾಗಲಿ ಆತನಿಗೇ ಮೊದಲನೆ ಸ್ಥಾನ. ರೈತ ನೆಲದ ಸಾರ! ನೆಲ ಅವನದೇ ಆಗಿದೆ ಅಥವಾ ಆಗಿರಬೇಕು. ಗೈರು ಹಾಜರು ಜಮೀನುದಾರನಿಗಲ್ಲ. ಅದೇ ಸರಿ. ಆದರೆ ಅಹಿಂಸಾ ಕ್ರಮದಲ್ಲಿ ಕಾರ್ಮಿಕರು ಗೈರು ಹಾಜರು ಭೂ ಮಾಲೀಕನನ್ನು ಬಲವಂತವಾಗಿ ಓಡಿಸುವಂತಿಲ್ಲ. ಭೂ ಮಾಲೀಕ ತನ್ನನ್ನು ಶೋಸಲು ಆಗದ ರೀತಿಯಲ್ಲಿ ರೈತ ಕೆಲಸ ಮಾಡಬೇಕು" (ಮಹಾತ್ಮಾ ಸಂ–೯, ಪುಟ–೩೬೪). ಗಾಂಧೀ ಭೂಮಿಯನ್ನು ಪ್ರೀತಿಸುತ್ತಿದ್ದರು. ಮತ್ತು ಅದರ ಮೇಲೆ ಕಾಯಕ ಮಾಡುವವರ ಜೀವನವೇ ಬಾಳಲರ್ಹ ಎಂದು ಅವರು ರಸ್ಕಿನ್‌ನ 'ಅನ್ ಟು ದಿಸ್ ಲಾಸ್ಟ್' ಎಂಬ ಪುಸ್ತಕವನ್ನು ಅನುವಾದ ಮಾಡಿದಾಗ ಬರೆದಿದ್ದರು. ಈಗ ಸರ್ಕಾರ ತಮಿಳುನಾಡಿನ ಕೂಡನ್‌ಕುಲಮ್‌ನಲ್ಲಿಯೂ, ಮಹಾರಾಷ್ಟ್ರದ ಜೈತಾಪುರ ಎಂಬಲ್ಲಿಯೂ ಮತ್ತು ಹರಿಯಾಣಾದ ಹಿಸ್ಸಾರ್‌ನಲ್ಲಿಯೂ ಅಣುಶಕ್ತಿ ಸ್ಥಾವರಗಳಿಗಾಗಿ ಭೂಮಿ ಪಡೆಯಲು ಉದ್ದೇಶಿಸಿದೆ. ಆದರೆ ಅಲ್ಲಿಯ ರೈತರು ತಮ್ಮ ಭೂಮಿ ಬಿಟ್ಟುಕೊಡಲು ಒಪ್ಪುತ್ತಿಲ್ಲ. ಆದ್ದರಿಂದ ಸರ್ಕಾರ ಮತ್ತು ರೈತರ ಮಧ್ಯ ಭಿನ್ನಾಭಿಪ್ರಾಯ ಉಂಟಾಗಿದೆ. ದೇಶದ ದೊಡ್ಡ ಮೇಧಾವಿ ಇಂಜಿನಿಯರ್

ಮತ್ತು ದಿವಾನರಾಗಿದ್ದ ಸರ್.ಎಮ್.ವಿಶ್ವೇಶ್ವರಯ್ಯನವರು 'ಕೈಗಾರಿಕಾಕರಣಗೊಳಿಸಿ ಇಲ್ಲವೆ ನಾಶಹೊಂದಿ' 'Industrialise or Perish'ಎಂದು ಹೇಳಿದ್ದರು; ಅವರ ಸಮಕಾಲೀನರಾಗಿದ್ದ ಗಾಂಧೀಜಿಯವರು "ನನಗೆ ಬೃಹತ್ ಉತ್ಪಾದನೆ ಬೇಕಿಲ್ಲ, ಬದಲಿಗೆ ಜನಸಾಮಾನ್ಯರಿಂದ ಉತ್ಪಾದನೆ ಬೇಕು" ಎಂದು ಹೇಳಿದ್ದರು.

ಅಂದರೆ ವ್ಯವಸಾಯದಲ್ಲಿರುವ ಭೂಮಿಯನ್ನು ದೊಡ್ಡ ಮೊತ್ತದ ಪರಿಹಾರದಾಸೆಯನ್ನು ತೋರಿಸಿ ರೈತನಿಂದ ಭೂಮಿ ಪಡೆಯುವುದು ಎಷ್ಟು ಸೂಕ್ತ ಎಂದು ಆಲೋಚಿಸಬೇಕು. ಯಾವ ರೀತಿ ವೈದ್ಯನ ಕೆಲಸವನ್ನು ವೈದ್ಯನೇ ಮಾಡಬಲ್ಲನೋ, ನಿರ್ಮಾಣದ ಕೆಲಸವನ್ನು ಇಂಜಿನಿಯರ್ ಮಾಡಬಲ್ಲನೋ ಅದೇ ರೀತಿ ಭೂ ಸೇವೆಯನ್ನು ರೈತ ಮಾತ್ರ ಮಾಡಬಲ್ಲ. ಆದ್ದರಿಂದ ೨೦೧೧ರ ಭೂ ಸ್ವಾಧೀನ ಮಸೂದೆ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರೂ ಸಹ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ನೋಡಿಕೊಂಡು ಶಾಸನವಾಗಲಿ ಎಂದು ಹಾರೈಸೋಣ.

* * *

ಜನಪದ ಧ್ವನಿ

ಯಾವುದೋ ರಾಜಿ ಸೂತ್ರದಿಂದ ಹಜಾರೆಯವರು ಉಪವಾಸ ಮುಗಿಸಿದರು. ಎಲ್ಲವೂ ತಣ್ಣಗಾಯಿತು. ಜನ ಅದುವರೆಗೆ ನಡೆದಿದ್ದೆಲ್ಲವನ್ನು ಮರೆತುಬಿಟ್ಟರು.

ಅಣ್ಣಾ ಹಜಾರೆಯವರು ಉಪವಾಸ ಸತ್ಯಾಗ್ರಹ ಮಾಡುವುದರ ಬದಲು ಪ್ರತಿಯೊಬ್ಬ ನಾಗರೀಕನನ್ನು ಯಾರಿಗೂ ಲಂಚಕೊಡುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕೆಂದು ಹೇಳಬೇಕಿತ್ತು. ಲಂಚ ಕೊಡುವವರು ಇಲ್ಲದಿದ್ದರೆ ಲಂಚ ತೆಗೆದು ಕೊಳ್ಳುವವರೂ ಇರುವುದಿಲ್ಲ. ಪ್ರತಿಯೊಬ್ಬರೂ ಸರ್ಕಾರಿ ಕಛೇರಿಗಳಲ್ಲಿ ತಮ್ಮ ಕೆಲಸವಾಗದಿದ್ದರೆ ಕೂಗಾಡ ಬೇಕು. ಪ್ರತಿಭಟಿಸಬೇಕು.

– ವೆಂಕಟರಮಣಶೆಟ್ಟಿ, ಮೈಸೂರು

ಜೀವ ಸಂಕುಲ ಮತ್ತು ಪಶ್ಚಿಮ ಘಟ್ಟಗಳು

– ಪ್ರಸಾದ್ ರಕ್ಷಿದಿ

ಇತ್ತೀಚೆಗೆ ಬಯಲು ಸೀಮೆಯಲ್ಲಿ ನೀರಿನ ಸಮಸ್ಯೆ ತಲೆದೋರಿದಾಗೆಲ್ಲ ಪಶ್ಚಿಮಕ್ಕೆ ಹರಿಯುವ ನದಿಗಳನ್ನೆಲ್ಲ ಪೂರ್ವಕ್ಕೆ ತಿರುಗಿಸುವ ಮಾತು ಕೇಳಿಬರುತ್ತದೆ. ಕರ್ನಾಟಕದ ಖಾಯಂ ಬರಪೀಡಿತ ಪ್ರದೇಶಗಳಾದ ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ನೀರಿನ ಕೊರತೆಯಾದಾಗ ಮತ್ತು ಕಾವೇರಿ ನೀರಿನ ಹಂಚಿಕೆಯಲ್ಲಿ ತಕರಾರು ಬಂದಾಗಲೆಲ್ಲ, ಪಶ್ಚಿಮಕ್ಕೆ ಹರಿದು 'ಸುಮ್ಮನೆ ಸಮುದ್ರ ಸೇರುತ್ತಿರುವ' ನೇತ್ರಾವತಿಯಂತಹ ಪಶ್ಚಿಮಕ್ಕೆ ಹರಿಯುವ ನದಿಗಳು ಮತ್ತು ಅದರ ಉಪನದಿಗಳನ್ನು ಪೂರ್ವಕ್ಕೆ ತಿರುಗಿಸಿ ದಕ್ಷಿಣ ಭಾರತದ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಿಸುವ ಮಾತನ್ನು ಎಲ್ಲಾ ಪಕ್ಷಗಳ ರಾಜಕಾರಣಿಗಳು ಪ್ರತಿ ಚುನಾವಣೆಯಲ್ಲೂ ಅದೊಂದು ನೇಮವೆಂಬಂತೆ ಆಡುತ್ತಲೇ ಇರುತ್ತಾರೆ. ಅವರ ಜೊತೆಯಲ್ಲೇ ಅನೇಕ ಜನ ಪ್ರಗತಿಪರರು, ಹಲವರು ನೀರಾವರಿ ತಜ್ಞರು, ಜೊತೆಗೊಂದಷ್ಟು ಜನ ಬುದ್ಧಿಜೀವಿಗಳೆನ್ನಿಸಿಕೊಂಡವರೂ ಸೇರುತ್ತಾರೆ. ಇವರೆಲ್ಲರ ವಾದವೆಂದರೆ ಈ ನದಿಗಳಲ್ಲಿ ವ್ಯರ್ಥವಾಗಿ ಹರಿದು ಸಮುದ್ರ ಸೇರುವ ನೀರನ್ನು ಸದ್ಬಳಕೆ ಮಾಡಲು ಸಾಧ್ಯವಾಗದಿರುವುದಕ್ಕೆ ಪರಿಸರವಾದಿಗಳೇ ಕಾರಣ. ಈ 'ಪರಿಸರವಾದಿಗಳು' ಯಾವುದೇ ಮುಂದಾಲೋಚನೆಯಿಲ್ಲದೆ ಇದನ್ನೆಲ್ಲ ವಿರೋಧಿಸುತ್ತಿದ್ದಾರೆ. ಇವರಿಗೆ ಮನುಷ್ಯ ಜೀವಕ್ಕಿಂತ ಕಾಡು, ಮರ, ಗಿಡ, ಕಲ್ಲು ಮಣ್ಣು, ಪ್ರಾಣಿ, ಪಕ್ಷಿಗಳೇ ಅಮೂಲ್ಯ. ಇವರ ಈ ಜನ ವಿರೋಧಿ ನಿಲುವಿನಿಂದಾಗಿ ಕೋಟ್ಯಂತರ ಜನ ಬಾಯಾರಿ ಬಳಲುತ್ತಿದ್ದಾರೆ, ಕೃಷಿ ನಾಶವಾಗುತ್ತಿದೆ ಎಂದು. ಇದನ್ನವರು ಮತ್ತೆ ಮತ್ತೆ ಹಲವು ವೇದಿಕೆಗಳಿಂದ ಕೆಲವೊಮ್ಮೆ ಘೋಷಣೆಯಂತೆ, ಇನ್ನು ಕೆಲವು ಸಾರಿ ಅಲಂಕಾರಿಕವಾಗಿ ಹೇಳುತ್ತಲೇ ಬಂದಿದ್ದಾರೆ.

ಇನ್ನೊಂದೆಡೆಯಿಂದ ಈ ಪರಿಸರವಾದಿಗಳಿಂದಾಗಿ ಅನೇಕ ಜಲವಿದ್ಯುತ್ ಯೋಜನೆಗಳು, ರೈಲು, ರಸ್ತೆ, ನಿರ್ಮಾಣಗಳಿಗೆ ಅಡ್ಡಿಯಾಗಿದೆ, ಇವರ ವಿರೋಧದಿಂದಾಗಿ ಗಣಿ ಉದ್ಯಮಕ್ಕೆ ಹಿನ್ನಡೆಯಾಗಿದೆ, ಇವರ ವಿವೇಚನಾರಹಿತ ಪ್ರತಿಭಟನೆಗಳಿಂದಾಗಿ ಲಕ್ಷಾಂತರ ಜನ ಉದ್ಯೋಗವಂಚಿತರಾಗಿ ನಾವು ಹಿಂದುಳಿದಿದ್ದೇವೆ. ಹಳ್ಳಿಯ ಜನ ಅಭಿವೃದ್ಧಿಯಿಂದ ವಂಚಿತರಾಗಿದ್ದಾರೆ. ಎಂದೆಲ್ಲ ಹೇಳುತ್ತ ಎಲ್ಲ ಅನಿಷ್ಟಕ್ಕೂ ಈ ಪರಿಸರವಾದಿಗಳೇ ಕಾರಣರೆಂಬಂತೆ ಚಿತ್ರಿಸುತ್ತಿರುವ, ಅಬಿವೃದ್ಧಿಯ ಮಂತ್ರ ಜಪಿಸುತ್ತಿರುವವರ ಗುಂಪು ಕೂಡಾ ದೊಡ್ಡದಾಗಿಯೇ ಇದೆ. ಈ ಎರಡೂ ಕಡೆಯವರಲ್ಲದೆ. ಈ ಪರಿಸರವಾದಿಗಳೆಲ್ಲ ವಾಹನಗಳಲ್ಲಿ ಓಡಾಡುವವರು, ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗಳಿಗೆ ಸೇರಿಸಿ ನಗರಗಳಲ್ಲಿ ನೆಲೆಸಿದವರು. ಇವರೆಲ್ಲ ಮೇಲ್ವರ್ಗದ ಜನರೆಂಬ ಇನ್ನೊಂದು ಭಯಂಕರ ವಾದವೂ ಇದೆ. (ಮೇಲ್‌ನೋಟಕ್ಕೆ ಈ ವಾದವೂ ನಿಜವಿರಬಹುದೆಂದು ಕಾಣಲು ಕಾರಣಗಳಿವೆ, ಈ ಬಗ್ಗೆ ಮುಂದೆ ವಿವರಿಸಿದ್ದೇನೆ.)

ಇಷ್ಟೆಲ್ಲ ವಾದಗಳ ನಡುವೆ ಮೊದಲನೆಯದಾಗಿ ಪರಿಸರವಾದಿಗಳೆಂದರೆ ಯಾರೆಂಬುದರ ಬಗ್ಗೆಯೇ ಗೊಂದಲವಿದೆ. ಬೇರೆಲ್ಲ ವಿಚಾರಗಳಲ್ಲಿ, ಸಂಘಟನೆಗಳಲ್ಲಿ ಇರುವಂತೆ ಇಲ್ಲೂ ಜೋರಾಗಿ ದನಿಯೆತ್ತಿ ಮಾತಾಡುತ್ತಾ ವೇದಿಕೆಗಳಲ್ಲಿ ಭಾಷಣ ಮಾಡುವಮಟ್ಟಿಗೆ ಸೀಮಿತರಾಗಿರುವವರು ಇದ್ದಾರೆ. 'ಪರಿಸರಕಾಳಜಿ'ಯನ್ನೇ ಸರಕಾಗಿಸಿಕೊಂಡು ಎಲ್ಲಕಡೆಗಳಲ್ಲೂ ಪಾಲುಗಿಟ್ಟಿಸಿಕೊಳ್ಳುವವರೂ ಇದ್ದಾರೆ. ಪರಿಸರ ನಾಶಕ್ಕೆ ಕಾರಣವಾಗುವ ಯಾವುದೇ ಯೋಜನೆ ಪ್ರಾರಂಭವಾಗುವ ಸೂಚನೆ ಸಿಕ್ಕಿದ ಕೂಡಲೇ ಎಲ್ಲರಿಗಿಂತ ಮೊದಲು ಪ್ರತಿಭಟನೆಗಿಳಿದು ಅಷ್ಟೇಬೇಗ ಒಳ ಒಪ್ಪಂದಗಳ ಮೂಲಕ ನಿಜವಾದ ಪ್ರತಿಭಟನೆಯೇ ಹುಟ್ಟದಂತೆ ಮಾಡುವವರಿದ್ದಾರೆ. ಆದರೆ ಪರಿಸರವಾದಿಗಳನ್ನು ಟೀಕಿಸುವ ಈ ಪ್ರಗತಿಪರರಾಗಲೀ ಬುದ್ಧಿಜೀವಿಗಳಾಗಲೀ ಈ ರೀತಿ ಭ್ರಷ್ಟರನ್ನು ಖಂಡಿತವಾಗಿಯೂ ಸಮರ್ಥಿಸುವವರಲ್ಲ. ಇವರೆಲ್ಲರ ವಿರೋಧ ನಿಜವಾದ ಪರಿಸರಾಸಕ್ತರ ಬಗೆಗೂ ಇದೆ ಮತ್ತು ಅದು ತಪ್ಪು ಕಲ್ಪನೆ ಮತ್ತು ತಪ್ಪು ತಿಳುವಳಿಕೆಗಳಿಂದಾಗಿದೆ ಎನ್ನುವುದಷ್ಟೇ ನನ್ನ ವಾದ.

ಇಷ್ಟೆಲ್ಲ ಗೊಂದಲಗಳಿದ್ದರೂ ನಿಜವಾದ ಪರಿಸರಾಸಕ್ತರ ಕಾಳಜಿಗಳೇನು, ಅವರು ಯಾಕಾಗಿ ಪರಿಸರ ನಾಶದಬಗ್ಗೆ ಆತಂಕಿತರಾಗಿದ್ದಾರೆ, ಇವರೆಲ್ಲ ಮನುಕುಲದ ವಿರೋಧಿಗಳೇ ಎಂದು ಯೋಚಿಸಿದರೆ ಕಾರಣಗಳು ಹೊಳೆದೀತು. ಯಾವನೇ ಒಬ್ಬ ವ್ಯಕ್ತಿ ಪರಿಸರನಾಶದ ವಿರೋಧಿಯಾಗಿರುವುದು ಮನುಕುಲದ ಉಳಿವಿಗಾಗಿಯೇ ಹೊರತು ಬೇರೆ ಇರಲು ಸಾಧ್ಯವಿಲ್ಲ. ಪ್ರಕೃತಿಗೆ ತನಗೆ ಬೇಡವಾದ್ದನ್ನು ನಿವಾರಿಸಿಕೊಳ್ಳುವ ಬಗ್ಗೆ ಇರುವ ಅಗಾಧವಾದ ಶಕ್ತಿ ಮತ್ತು ಆ ಕಾರಣಕ್ಕಾಗಿ ಪ್ರಕೃತಿನಾಶದ ಪರಿಣಾಮದಿಂದ ಈ ಭೂಮಂಡಲದಿಂದ ಮೊದಲು ನಿರ್ಗಮಿಸುವವನು ಮನುಷ್ಯನೇ ಆಗಿಬಿಡಬಹುದೆಂಬ ಭಯ ಮತ್ತು ಎಚ್ಚರಗಳಿಂದ ಪರಸರದ ಬಗ್ಗೆ ಕಾಳಜಿ ವಹಿಸುವದು ಅಗತ್ಯವಾಗಿದೆ.

ಈ ನೆಲೆಯಿಂದ ಈಗ ಹೆಚ್ಚು ಪ್ರಚಾರದಲ್ಲಿರುವ ನದಿ ತಿರುವು ಯೋಜನೆಗಳನ್ನು ನೋಡಿದರೆ ಹಲವು ಸಂಗತಿಗಳು ಗೋಚರವಾಗುತ್ತವೆ. ಉದಾಹರಣೆಯಾಗಿ ನೇತ್ರಾವತಿ ನದಿ ಮತ್ತು ಅದರ ಉಪನದಿಗಳಾದ ಕುಮಾರಧಾರಾ, ಕೆಂಪುಹೊಳೆ, ಕನ್ನಡಿಹೊಳೆ, ಎತ್ತಿನಹಳ್ಳ, ಮುಂತಾದವುಗಳು. ಇವುಗಳೆಲ್ಲ ಸೇರಿದರೆ ಇವುಗಳೆಲ್ಲದರ ಒಟ್ಟು ಹರಿವಿನ ಉದ್ದ ಸುಮಾರು ಮುನ್ನೂರು ಕಿ.ಮೀ ಗಳಾಗಬಹುದು, ಹಾಗೇ ಈ ಎಲ್ಲ ನದಿಗಳ ಒಟ್ಟು ಜಲಾನಯನ ಪ್ರದೇಶವೂ ಕೂಡಾ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಚದರ ಕಿ.ಮೀ ಗಳಾಗುತ್ತದೆ. ಅಂದರೆ ಈ ಜಲಾಯನ ಪ್ರದೇಶದಲ್ಲಿ ಸರಿಯಾಗಿ ಮಳೆಯಾದರಷ್ಟೇ ನೇತ್ರಾವತಿ ತುಂಬಿ ಹರಿಯಬಲ್ಲಳು ಮತ್ತು ಮಳೆಗಾಲ ತನ್ನ ಹರಿವಿನುದ್ದಕ್ಕೂ ಇಂಗಿ ಒರತೆಯಾದರೆ ಮಾತ್ರ ಬೇಸಿಗೆಯಲ್ಲಿ ಸ್ವಲ್ಪ ಮಟ್ಟಿಗೆ ನೀರನ್ನು ಹರಿಸಬಲ್ಲಳು.

ನಮ್ಮ ನದಿ ತಿರುವು ಯೋಜನೆಯ ಪ್ರತಿಪಾದಕರಲ್ಲಿ ಎರಡು ಯೋಜನೆಗಳಿವೆ. ಮೊದಲನೆಯದು ಪಶ್ಚಿಮಘಟ್ಟಗಳ ಇಳಿಜಾರಿನಲ್ಲಿ ಅಂದರೆ ಸುಮಾರಾಗಿ ಗುಡ್ಡಗಳ ಮಧ್ಯಭಾಗದಲ್ಲಿ ಒಂದು ಕಾಲುವೆಗಳ ಜಾಲವನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಿ ಹೇಮಾವತಿ ನದಿಯತ್ತ ತಿರುಗಿಸುವುದು. ಇದು ದೊಡ್ಡ ಯೋಜನೆಯಾಗಿದ್ದು

ಇದರ ಪರಿಣಾಮಗಳ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ ಆಗುತ್ತಲೇ ಇದೆ. ಎರಡನೆಯದು ಎತ್ತಿನ ಹಳ್ಳದಂತಹ ಸಣ್ಣ ಸಣ್ಣ ಹೊಳೆಗಳನ್ನು ಘಟ್ಟಪ್ರದೇಶದ ಮೇಲ್ಭಾಗದಲ್ಲೇ ತಿರುಗಿಸಿಬಿಡುವುದು. ಇದು ಮೇಲ್ನೋಟಕ್ಕೆ ಬಹಳ ಸೂಕ್ತವಾದ ಯಾವುದೇ ಸಮಸ್ಯೆಯಾಗಲೀ ಹೆಚ್ಚಿನ ಪರಿಸರ ನಾಶವಾಗಲೀ ಇಲ್ಲದ ಯೋಜನೆಯಂತೆ ಕಂಡುಬರುತ್ತದೆ. ಆದರೆ ನಾವು ಈ ರೀತಿ ಹೊಳೆಗಳ ತಿರುವು ಯೋಜನೆಯ ವಿವರಗಳನ್ನು ನೋಡಿದರೆ ಇವುಗಳು ಹರಿಯುತ್ತಿರುವ ಪ್ರದೇಶ ವ್ಯಾಪಕವಾಗಿ ಕೃಷಿಗೊಳಪಟ್ಟಿರುವುದು ಮತ್ತು ಮಲೆನಾಡಿನ ಹೆಚ್ಚಿನ ಹಳ್ಳಿಗಳು ಇಂದು ಈ ರೀತಿಯ ಹೊಳೆಗಳಿಂದಲೇ ಕುಡಿಯುವ ನೀರನ್ನು ಬಳಸಿಕೊಳ್ಳುತ್ತಿದ್ದು ಬೇಸಿಗೆಯಲ್ಲಿ ಈ ಹೊಳೆಗಳ ಹರಿವಿನ ಪ್ರಮಾಣ ಅತ್ಯಂತ ಕಡಿಮೆಯಾಗಿರುತ್ತದೆ. (ಮಲೆನಾಡಿನಲ್ಲಿ ಕೊರೆದ ಕೊಳವೆ ಬಾವಿಗಳೆಲ್ಲ ಈಗಾಗಲೇ ಬರಿದಾಗಿವೆ. ಪ್ರತಿ ಹಳ್ಳಿಯಲ್ಲೂ ಕೊರೆದಿರುವ ಹತ್ತಾರು ಕೊಳವೆ ಬಾವಿಗಳಲ್ಲಿ ಒಂದೋ ಎರಡೋ ಕೆಲಸ ಮಾಡುತ್ತಿದ್ದರೆ ಹೆಚ್ಚು). ಹಾಗಾಗಿ ಬೇಸಿಗೆಯಲ್ಲಿ ಈ ಹೊಳೆಗಳಿಂದ ನೀರು ಸಿಗುವ ಸಾಧ್ಯತೆಯೇ ಇಲ್ಲ. ಇನ್ನು ಮಳೆಗಾಲದ ನೀರನ್ನು ಬಳಸಿಕೊಳ್ಳಬಹುದಲ್ಲ ಎಂದರೆ ಇಂತಹ ನದಿಗಳ ಮಳೆಗಾಲದ ಹರಿವನ್ನು ಬಳಸಿಕೊಂಡು (ಮತ್ತದೇ ಪರಿಸರವಾದಿಗಳ ವಿರೋಧವನ್ನು ಲೆಕ್ಕಿಸದೆ) ಪ್ರಾರಂಭಿಸಿರುವ ಕಿರುಜಲವಿದ್ಯುತ್ ಯೋಜನೆಗಳಿವೆ. ಇವುಗಳಲ್ಲಿ ಕೆಲವು ಈಗಾಗಲೇ ವಿದ್ಯುತ್ ಉತ್ಪಾದನೆಯನ್ನೂ ಆರಂಭಿಸಿದ್ದು ಇವುಗಳು ನೀರಿನಬಳಕೆ ಬಗ್ಗೆ ಸರ್ಕಾರದೊಂದಿಗೆ ಧೀರ್ಘಾವದಿ ಒಪ್ಪಂದಗಳನ್ನು ಮಾಡಿಕೊಂಡಿವೆ. ಹಾಗಾಗಿ ಮಳೆಗಾಲದ ನೀರನ್ನೂ ತಿರುಗಿಸುವ ಸಾಧ್ಯತೆಯೂ ಇಲ್ಲವಾಗಿದೆ.

ಈಗ ಈ ನದಿಗಳ ಹರಿವಿನುದ್ದಕ್ಕೂ ಇರುವ ಜೀವ ವೈವಿಧ್ಯವೇನು, ನದೀ ನೀರಿನ ತಿರುವಿನಿಂದ ಇದರ ಮೇಲಾಗುವ ಪರಿಣಾಮಗಳೇನು ಎಂಬ ವಿಚಾರವನ್ನೆಲ್ಲ ಬದಿಗಿಟ್ಟು ನೋಡಿದರೂ ಈ ನದಿಯನ್ನೇ ನಂಬಿರುವ ಕೃಷಿಕರ ಗತಿಯೇನು ಈ ಬಗ್ಗೆ ಯಾರೂ ಮಾತಾಡುವುದಿಲ್ಲ. ನದಿಗಳ ಹರಿವಿನ ಮೂಲಕ ಸಮುದ್ರದ ನೀರಿಗೆ ಪೂರೈಕೆಯಾಗುತ್ತಿರುವ ಆಮ್ಲಜನಕದಿಂದ ಬದುಕುತ್ತಿರುವ ಜಲಚರಗಳ ಗತಿಯೇನು. ಈಗಾಗಲೇ ಯಾಂತ್ರೀಕೃತ ದೋಣಿಗಳ ವ್ಯಾಪಕ ಬಳಕೆಯಿಂದ ಉಂಟಾಗುತ್ತಿರುವ ಮತ್ಸ್ಯಕ್ಷಾಮ, ಈ ನದೀತಿರುವು ಯೋಜನೆಗಳಿಂದಾಗಿ ಇನ್ನಷ್ಟು ಹೆಚ್ಚಾದರೆ ಲಕ್ಷಾಂತರ ಮೀನುಗಾರರೇನು ಮಾಡಬೇಕು. ಇವರಿಗೆ ಯಾವ ಪರ್ಯಾಯವಿದೆ. ಯಾರೂ ಹೇಳುತ್ತಿಲ್ಲ. (ಈ ಕಾರಣಕ್ಕಾಗಿಯೇ ನದೀ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಬರುವುದಿಲ್ಲ, ಅಣೆಕಟ್ಟುಗಳನ್ನು ಸಾಲುಸಾಲಾಗಿ ಕಟ್ಟಿ ಎಲ್ಲಾ ನೀರನ್ನೂ ಸಮುದ್ರ ಸೇರದಂತೆ ತಡೆದರೆ ಪರಿಸರದ ಮೇಲೆ ಆಗುವ ವ್ಯತಿರಿಕ್ತ ಪರಿಣಾಮದ ಬಗ್ಗೆ ಈಗಾಗಲೇ ವಿಜ್ಞಾನಿಗಳು ಹಲವುಬಾರಿ ಎಚ್ಚರಿಸಿದ್ದಾರೆ. ಕಾವೇರಿ ನದಿ ನೀರು ಕೂಡಾ ಕರ್ನಾಟಕ ಮತ್ತು ತಮಿಳುನಾಡಿನ ಎಲ್ಲ ಅಣೆಕಟ್ಟುಗಳು ತುಂಬಿದ ನಂತರ ಸಮುದ್ರ ಸೇರಿ ಹಾಳಾಗುತ್ತಿದೆ ಎನ್ನುವವರು ಗಮನಿಸಬೇಕು. ಸಾಧ್ಯವಿದ್ದರೆ ಆ ನೀರನ್ನು ವಿದ್ಯುದುತ್ಪಾದನೆಗೆ ಬಳಸಿಕೊಂಡು ಸಮುದ್ರಕ್ಕೆ ಬಿಡಬಹುದೇ ಹೊರತು ಸಂಪೂರ್ಣವಾಗಿ ಕೃಷಿಗೋ- ಕುಡಿಯುವ ನೀರಿಗೋ ಬಳಸಿಕೊಳ್ಳುವುದು ಸರಿಯಲ್ಲ)

ನದಿ ತಿರುವು ಯೋಜನೆಯ ಸಮರ್ಥಕರು ಹೇಳುವಂತೆ ಕುಡಿಯುವ ನೀರಿಗಾಗಿ ಈ ಯೋಜನೆಗಳನ್ನು ಒಪ್ಪಿಕೊಂಡರೂ ಕೂಡಾ ಈಗಾಗಲೇ ಪರಿಸರ ವಾದಿಗಳ ವಿರೋಧವನ್ನು ಲೆಕ್ಕಿಸದೆ ಸರ್ಕಾರಗಳು (ಕೇಂದ್ರ ಮತ್ತು ರಾಜ್ಯ) ಅನೇಕ ಜಲವಿದ್ಯುತ್ ಯೋಜನೆಗಳಿಗೆ ಅನುಮತಿ ನೀಡಿವೆ. ಕೆಲವು ಯೋಜನೆಗಳು ಪೂರ್ಣಗೊಂಡು ವಿದ್ಯುದುತ್ಪಾದನೆ ಪ್ರಾರಂಭಿಸಿವೆ. ಇವೆಲ್ಲವೂ ಮಳೆಗಾಲದಲ್ಲಿ ಹರಿಯುವ ನೀರನ್ನೇ ಬಳಸಿಕೊಳ್ಳುವ ಯೋಜನೆಗಳಾಗಿವೆ. ಸಾವಿರಾರು ಎಕರೆ ದಟ್ಟ ಅರಣ್ಯ ನಾಶವಾಗಿ ಹನ್ನೆರಡು ಗ್ರಾಮಗಳು ಜಲಾವೃತವಾಗುವ, ಸರಣಿ ಅಣೆಕಟ್ಟುಗಳಿಂದ ಒಟ್ಟು ಐವತ್ತಕ್ಕೂ ಹೆಚ್ಚು ಕಿ.ಮೀ ವ್ಯಾಪ್ತಿಯಲ್ಲಿ ನೀರು ನಿಲ್ಲುವ ಗುಂಡ್ಯ ಜಲವಿದ್ಯುತ್ ಯೋಜನೆಗೆ ದೊಡ್ಡ ಪ್ರಮಾಣದಲ್ಲಿ ವಿರೋಧ ಬಂದ ನಂತರ ಇದೀಗ ಕೇಂದ್ರ ಸರ್ಕಾರ, ಅಲ್ಲಿ ಯಾವುದೇ ಅಣೆಕಟ್ಟು ಕಟ್ಟಲು ಅನುಮತಿ ನೀಡುತ್ತಿಲ್ಲವೆಂದೂ, ಅಣೆಕಟ್ಟು ಕಟ್ಟದೆ ಮಳೆಗಾಲದಲ್ಲಿ ಮಾತ್ರ ವಿದ್ಯುತ್ ಉತ್ಪಾದನೆಮಾಡಲು ಅನುಮತಿ ನೀಡಲಾಗಿದೆ ಎಂದು ಹೇಳುತ್ತಿದೆ. (ಈ ಲೇಖನ ಸಿದ್ಧವಾಗುವ ಹೊತ್ತಿಗೆ ಕೇಂದ್ರ ಸರ್ಕಾರ ಗುಂಡ್ಯ ಜಲವಿದ್ಯುತ್ ಯೋಜನೆಯ ಬಗ್ಗೆ ಜನರಿಂದ ಅಭಿಪ್ರಾಯ ಸಂಗ್ರಹಿಸಲು ಒಂದು ತಂಡವನ್ನು ಕಳುಹಿಸಿದೆ. ಅದರ ಫಲಶ್ರುತಿಯ ಬಗ್ಗೆ ಈಗಲೇ ಏನನ್ನೂ ಹೇಳಲು ಸಾಧ್ಯವಿಲ್ಲವಾದರೂ ಹಿಂದಿನ ಎಲ್ಲ ಅನುಭವಗಳ ಆಧಾರದಿಂದ ನೋಡಿದರೆ ಕೇಂದ್ರ ಸರ್ಕಾರ ಅಣೆಕಟ್ಟು ಕಟ್ಟಲು ಅನುಮತಿ ನೀಡುವ ಸಾಧ್ಯತೆಯೇ ಹೆಚ್ಚಾಗಿದೆ).

ಏನೇ ಆದರೂ ಈ ಎಲ್ಲ ಕಾರಣಗಳಿಂದ ಈ ನದಿಗಳನ್ನು ಪೂರ್ವಕ್ಕೆ ತಿರುಗಿಸುವ ಯೋಜನೆಗಳಿಗೆ ಈ ಜಲ ವಿದ್ಯುತ್‌ಯೋಜನೆಗಳೇ ಅಡ್ಡಿಯಾಗುತ್ತವೆ.

ಆದರೆ ಪರಿಸರವಾದಿಗಳ ಬಗ್ಗೆ ಕೋಪ–ತಾಪಗಳನ್ನು ಪ್ರದರ್ಶಿಸುತ್ತಿರುವವರು ತಿಳಿದಷ್ಟು ಸರಳವಾಗಿ ಈ ಸಮಸ್ಯೆ ಖಂಡಿತ ಇಲ್ಲ. ಮೊದಲನೆಯದಾಗಿ ಪರಿಸರ ವಾದಿಯೋ–ಪ್ರೇಮಿಯೋ ಅಂತೂ ಪರಿಸರವನ್ನು ಉಳಿಸಬೇಕೆನ್ನುವವರಲ್ಲೂ ಹಲವು ವಿಚಾರಗಳನ್ನಿಟ್ಟುಕೊಂಡಿರುವವರಿದ್ದಾರೆ. ಇವರೆಲ್ಲರೂ ನಿಜವಾದ ಕಾಳಜಿಯನ್ನಿಟ್ಟುಕೊಂಡಿರುವವರು ಎಂದುಕೊಂಡರೂ ಆಧುನಿಕ ಜೀವನ ಕ್ರಮವನ್ನು ಒಪ್ಪಿಕೊಂಡ ಮೇಲೆ ಸ್ವಲ್ಪ ಮಟ್ಟಿನ ರಾಜಿ ಅನಿವಾರ್ಯ ಎನ್ನುವವರಿದ್ದಾರೆ. ನಮಗೆ ರಸ್ತೆ, ವಿದ್ಯುತ್, ಮುಂತಾದವು ಬೇಕೇಬೇಕು ಎಂದಮೇಲೆ ಅರಣ್ಯನಾಶವೂ ಅನಿವಾರ್ಯವಾದ್ದರಿಂದ ಮರಗಿಡಗಳನ್ನು ಬೆಳೆದರಾಯ್ತು ಎಂದುಕೊಂಡವರಿದ್ದಾರೆ. ಹಾಗೇ ಪರಿಸರದ ವಿಚಾರದಲ್ಲಿ ಯಾವುದೇ ರಾಜಿಗೂ ಸಿದ್ಧವಿಲ್ಲದವರೂ ಇದ್ದಾರೆ.

ಈ ಎಲ್ಲ ವಿಚಾರಗಳನ್ನು ಬಿಟ್ಟು ಯೋಚನೆ ಮಾಡಿದರೂ ಕೂಡಾ ಈ ಜಲವಿದ್ಯುತ್ ಯೋಜನೆಗಳಿಗಾಗಲೀ, ನದೀತಿರುವು ಯೋಜನೆಗಳಿಗಾಗಲೀ, ಪಶ್ಚಿಮ ಘಟ್ಟಗಳ ಜೀವ ವೈವಿಧ್ಯವನ್ನು ನಾಶ ಮಾಡುವ ಯಾವುದೇ ಯೋಜನೆಗೆ ಸ್ಥಳೀಯ ಕೃಷಿಕರಿಂದ ಅಥವಾ ಕೃಷಿಕಾರ್ಮಿಕರಿಂದ ಯಾಕೆ ವ್ಯಾಪಕವಾದ ವಿರೋಧ ಬರುತ್ತಿಲ್ಲ? ಇದಕ್ಕೆ ಹಲವು ಕಾರಣಗಳಿವೆ. ಪರಿಸರವಾದಿಗಳ ಸಂಘಟನಾತ್ಮಕ ಸಮಸ್ಯೆಗಳು ಸ್ವಲ್ಪಮಟ್ಟಿಗೆ ಕಾರಣವಿದ್ದರೆ, ಇನ್ನಿತರೆ ಕಾರಣಗಳು ಹಲವಿವೆ. ಮುಖ್ಯವಾಗಿ ಅಲ್ಲಿನ ಕೃಷಿಕರು ಹಲವು ರೀತಿಗಳಿಂದ ಬಳಲಿಹೋಗಿದ್ದಾರೆ. ಯಾವ ಕೃಷಿಯೂ ನಿರಂತರ ಲಾಭದಾಯಕವಲ್ಲದೆ

ಕೃಷಿಕ ಸಾಲದಲ್ಲಿ ಮುಳುಗಿ ಹೋಗಿದ್ದಾನೆ. ಎಲ್ಲ ಸರ್ಕಾರಗಳು ಮೂಗಿಗೆ ತುಪ್ಪ ಸವರಿದಂತೆ ನೀಡಿದ ಯಾವುದೇ 'ಪ್ಯಾಕೇಜ್' ಅವನಿಗೆ ಭರವಸೆಯನ್ನು ತುಂಬಿಲ್ಲ. ಈಗಾಗಲೇ ಹಣದ ಅವಶ್ಯಕತೆಗಳಿಗಾಗಿಯೋ ಇನ್ನಾವುದೇ ಕಾರಣಕ್ಕೋ ತನ್ನ ಜಮೀನಿನಲ್ಲಿದ್ದ ಅಲ್ಪಸ್ವಲ್ಪ ಮರಗಳನ್ನು ಮಾರಾಟಮಾಡಿ, ಆ ಜಮೀನು ಕೂಡಾ ಭೂ ಸವಕಳಿಯಿಂದ ಬರಡಾಗಿದೆ. ಆ ಕಾರಣದಿಂದ ವರ್ಷಕ್ಕೆ ನೂರೈವತ್ತರಿಂದ ಇನ್ನೂರು ಇಂಚುಗಳಷ್ಟು ಮಳೆಯಾಗುವ ಆ ಪ್ರದೇಶದ ಪಾರಂಪರಿಕ ಬೆಳೆಗಳನ್ನು ಬೆಳೆಯಲಾರದ ಸ್ಥಿತಿ ತಲಪಿದ್ದಾನೆ. ಇದರೊಂದಿಗೆ ಈಗಾಗಲೇ ಅನುಷ್ಠಾನಕ್ಕೆ ಬಂದಿರುವ ಹಲವು ಯೋಜನೆಗಳಿಂದಾಗಿ ನಡೆದ ಅರಣ್ಯಪ್ರದೇಶದ ಅತಿಕ್ರಮಣದಿಂದಾಗಿ ಆನೆಯೊಂದೇ ಅಲ್ಲ ಇತರ ಕಾಡು ಪ್ರಾಣಿಗಳೂ ಊರೊಳಗೆ ಬರಲಾರಂಭಿಸಿವೆ. ಇವೆಲ್ಲದರ ಜೊತೆ ಕೃಷಿಗೆ ಕೆಲಸಗಾರರು ಸಿಗದಿರುವುದರಿಂದ ಕೃಷಿಕ ಇನ್ನಷ್ಟು ಸೋತು ಹೋಗಿದ್ದಾನೆ. ಘಟ್ಟಪ್ರದೇಶದ ದುರ್ಗಮ ನೆಲೆಯಲ್ಲಿರುವ ತನ್ನ ಜಮೀನನ್ನು ಮಾರಾಟ ಮಾಡಿ ಹೋಗೋಣವೆಂದರೆ, ಜಮೀನನ್ನು ಕೊಳ್ಳುವವರಿಲ್ಲದೆ ಕೃಷಿಕ ನಿರಾಶನಾಗಿ ಕುಳಿತಿದ್ದಾನೆ. ಇಂತಹ ಸಂದರ್ಭದಲ್ಲಿ ಅಲ್ಲಿಗೆ ಬರುವ ಯಾವುದೇ ಯೋಜನೆ ಅವನಿಗೆ ಹೊಸ ಆಸೆಗಳನ್ನು ತರುತ್ತದೆ. ಹೇಗೂ ಮಾರಲು ಅಸಾಧ್ಯವಾಗಿರುವ ತನ್ನ ಜಮೀನಿಗೆ ಒಳ್ಳೆಯ ಪರಿಹಾರಧನ ದೊರಕಿ ತಾನು ಇಲ್ಲಿಂದ ಮುಕ್ತಿಪಡೆಯಬಹುದು, (ಪ್ರತೀ ಬಾರಿಯೂ ಈ ಯೋಜನೆಗಳ ವಿಚಾರ ಜನಾಭಿಪ್ರಾಯ ಸಂಗ್ರಹ ಸಭೆಗಳಲ್ಲಿ ಮತ್ತು ಇನ್ನಿತರ ಮಾಧ್ಯಮಗಳಲ್ಲಿ ಇವರು ತಮ್ಮ ಅಸಹಾಯಕತೆ ಮತ್ತು ಅಳಲನ್ನು ತೋಡಿಕೊಳ್ಳುತ್ತಿದ್ದಾರೆ) ಇಲ್ಲವೇ ಯೋಜನೆಗಳಿಂದಾಗಿ ಇಲ್ಲಿಗೆ ಬರುವ ಜನರ ಸಂಖ್ಯೆ ಹೆಚ್ಚಾಗುವುದರಿಂದ ಬೇರೇನಾದರೂ ಕೆಲಸವೋ ವ್ಯಾಪಾರವೋ ಮಾಡಬಹುದೆಂಬ ಹವಣಿಕೆಯಲ್ಲಿದ್ದಾನೆ. ಇವರಲ್ಲಿ ಕೆಲವರ ಮಕ್ಕಳು ವಿದ್ಯಾಭ್ಯಾಸ ಮುಗಿಸಿ ಈಗಾಗಲೇ ಇಲ್ಲಿಂದ ದೂರವಾಗಿದ್ದಾರೆ. ಹೇಗಾದರೂ ಇಲ್ಲಿಂದ ಬಿಡುಗಡೆ ದೊರೆಯಲಿ ಎಂಬ ಹತಾಶ ಸ್ಥಿತಿಯಲ್ಲಿ, ಈ ಎಲ್ಲ ಪರಿಸರ ನಾಶದ ಯೋಜನೆಗಳನ್ನು ಪ್ರಬಲವಾಗಿ ಸಮರ್ಥಿಸುತ್ತಿರುವ ಇವರ ದೌರ್ಭಾಗ್ಯವನ್ನು ಅರ್ಥಮಾಡಿಕೊಂಡು, ಅವರಿಗೆ ಅತ್ಯಂತ ಹೆಚ್ಚಿನ ಪರಿಹಾರವನ್ನು ಕೊಟ್ಟು ಅವರು ಬೇರೆಡೆಗೆ ಹೋಗಲು ಅನುವು ಮಾಡಿಕೊಡಬೇಕು. (ದೊಡ್ಡ ಕೈಗಾರಿಕೆಗಳಿಗೆ ಕೊಡುತ್ತಿರುವ ರಿಯಾಯಿತಿಗಳ ಮುಂದೆ ಈ ಮೊತ್ತ ನಗಣ್ಯವಾದುದು ಉದಾಹರಣೆಗೆ ಗುಂಡ್ಯ ಯೋಜನೆಯಲ್ಲಿ ಸ್ಥಳಾಂತರಿಸ ಬೇಕಾಗಿರುವ ಎಲ್ಲ ಜನರಿಗೆ ಕೊಡಬೇಕಾದ ಪರಿಹಾರದ ಮೊತ್ತ ಕೆಲವು ಕೋಟಿ ರೂಪಾಯಿಗಳು).

ಇನ್ನು ಇಲ್ಲಿರುವ ಕೂಲಿ ಕಾರ್ಮಿಕರಾದರೂ ಅಷ್ಟೆ. ಹೆಚ್ಚಿನವರು ಅಧಿಕ ಕೂಲಿ ದೊರೆಯುವ ಇತರ ಪ್ರದೇಶಗಳಿಗೋ ನಗರಗಳಿಗೋ ಹೋಗಿದ್ದಾರೆ. ಹೊಸ ಯೋಜನೆಗಳೇನಾದರೂ ಬಂದರೆ ಇನ್ನೂ ಉತ್ತಮ ಕೂಲಿದೊರೆಯುವ ನಿರೀಕ್ಷೆಯಲ್ಲಿ ಇವರಿದ್ದರೆ, ಸಣ್ಣ ಪುಟ್ಟ ವ್ಯಾಪಾರಿಗಳು, ಟೀ ಅಂಗಡಿಗಳವರು ಇದೇ ಮನಸ್ಥಿತಿಯಲ್ಲಿದ್ದಾರೆ. ಇವರೆಲ್ಲ ಯಾವುದೇ ದೂರಗಾಮೀ ಪರಿಣಾಮಗಳ ಬಗ್ಗೆ ಯೋಚಿಸದೆ ತಮ್ಮ ಬದುಕು ಉತ್ತಮಗೊಂಡೀತೆಂಬ ಮನುಷ್ಯ ಸಹಜ ಆಸೆಯಿಂದ ಈ ಯೋಜನೆಗಳನ್ನು ಸ್ವಾಗತಿಸುತ್ತ ಕುಳಿತಿದ್ದಾರೆ. ಇದಕ್ಕಿಂತ ಶಕ್ತಿಶಾಲಿ, ಪ್ರಭಾವಶಾಲಿ

ಹಾಗೂ ಅಪಾಯಕಾರಿಯಾದ ಗುಂಪೊಂದಿದೆ. ಇವರಲ್ಲಿ ಕೆಲವರು ನೇರವಾಗಿ ಅಭಿವೃದ್ಧಿಯ ಹರಿಕಾರರಂತೆ ಮಾತನಾಡುತ್ತ ಈ ಎಲ್ಲ ಯೋಜನೆಗಳನ್ನು ನೇರವಾಗಿ ಸಮರ್ಥಿಸುತ್ತ ಈ ಮೊದಲು ತಿಳಿಸಿದ ಪ್ರಗತಿಪರರ ಹಾಗೂ ಬುದ್ಧಿಜೀವಿಗಳ ಮಾತನ್ನು ತಮ್ಮ ಸಮರ್ಥನೆಗಾಗಿ ಬಳಸಿಕೊಳ್ಳುತ್ತಾರೆ. ಇನ್ನು ಕೆಲವರು ಇವರಿಗಿಂತಲೂ ಹೆಚ್ಚು ಅಪಾಯಕಾರಿಗಳು ಇವರು ಈ ಯೋಜನೆಗಳನ್ನು ವಿರೋಧಿಸುವವರ ಜೊತೆಯಲ್ಲಿ ಕಾಣಿಸಿಕೊಳ್ಳುತ್ತಾ, ಈ ಎಲ್ಲ ಯೋಜನೆಗಳ ಅನುಷ್ಠಾನವಾದರೆ ತಮಗೆ ದೊರೆಯಬಹುದಾದ ಲಾಭದ ಲೆಕ್ಕಾಚಾರದಲ್ಲಿರುತ್ತಾರೆ.

ಯಾಕೆಂದರೆ ಈ ಎರಡು ಗುಂಪಿನ ಜನರೇ ಈ ಎಲ್ಲ ಯೋಜನೆಗಳಿಂದ ಲಾಭಪಡೆಯುವವರು, ಇವರಲ್ಲಿ ಗುತ್ತಿಗೆದಾರರದು, ಮರದ ವ್ಯಾಪಾರಿಗಳು, ಮರಳು ದಂಧೆಯವರು, ಗ್ರಾನೈಟ್ ಗಣಿಗಾರಿಕೆಯವರು, ರಿಯಲ್ ಎಸ್ಟೇಟ್ ದಳ್ಳಾಳಿಗಳು, ಮತ್ತು ಇವರಿಂದ ಲಾಭ ಪಡೆಯುತ್ತಿರುವ ಅನೇಕ ಸ್ಥಳೀಯರು ಮತ್ತು ಕೆಲವರು ಪರ್ತಕರ್ತರೂ ಇದ್ದಾರೆ. ಇವರಿಗೆ ಜಲವಿದ್ಯುತ್ ಯೋಜನೆಯಾಗಲೀ, ನದೀ ತಿರುವು ಯೋಜನೆಯಾಗಲೀ, ರಸ್ತೆ ನಿರ್ಮಾಣವಾಗಲೀ ಯಾವ ವ್ಯತ್ಯಾಸವೂ ಇಲ್ಲ. ಯಾವುದೇ ಯೋಜನೆ ಇವರ ಪಾಲಿಗೆ ಹಿಂಡುವ ಹಸುವಾಗಬಲ್ಲದು. ಇವರುಗಳು ಬಹಳ ಸಮರ್ಥವಾಗಿ ಸ್ಥಳೀಯ ಜನರಲ್ಲಿ ಹೊಸ ಆಸೆ–ಆಕಾಂಕ್ಷೆಗಳನ್ನು ತುಂಬಬಲ್ಲರು. ಈ ಕಾರಣಗಳಿಂದಾಗಿ ಈ ಎಲ್ಲ ಯೋಜನೆಗಳ ವಿರೋಧವಾಗಿ ಸಭೆ, ಜಾತಾ, ಸತ್ಯಾಗ್ರಹ, ಜನಾಭಿಪ್ರಾಯ ಸಂಗ್ರಹ ಸಭೆ ಏನೇ ನಡೆಯಲಿ, ಸ್ಥಳೀಯ ಕೃಷಿಕ–ಕಾರ್ಮಿಕರಿಂದ ದೊಡ್ಡ ಪ್ರಮಾಣದ ಬೆಂಬಲ ಸಿಗುತ್ತಿಲ್ಲ, ಆದ್ದರಿಂದ ಈ ಕಾರ್ಯಕ್ರಮಗಳಲ್ಲಿ ಹೊರಗಿನವರ ಸಂಖ್ಯೆಯೇ ಹೆಚ್ಚಾಗಿ ಕಾಣಸಿಗುತ್ತದೆ ಇದರಿಂದಾಗಿ ಈ ಯೋಜನೆಗಳಿಗೆ ಸ್ಥಳೀಯರ ವಿರೋಧವಿಲ್ಲ, ಈ ಪರಿಸರವಾದಿಗಳು ಹೊರಗಿನವರು, ಹೊಟ್ಟೆ ತುಂಬಿದ ಸುಶಿಕ್ಷಿತರು, ಮೇಲ್ವರ್ಗದ ಜನ, ಇತ್ಯಾದಿ ವಾದಗಳು ಹುಟ್ಟಿಕೊಳ್ಳುತ್ತಿವೆ.

ಈಗಾಗಲೇ ಪೂರ್ಣಗೊಂಡಿರುವ ಕೆಂಪುಹೊಳೆ ಯೋಜನಾ ಪ್ರದೇಶದಲ್ಲೊಮ್ಮೆ ಸುತ್ತಾಡಿ ಬಂದರೆ ಆಗಿರುವ ಭೂಸವಕಳಿ, ಅರಣ್ಯ ನಾಶ ಕಾಣುತ್ತದೆ.(ಇದು ಸುಮಾರು ೨೦ ಮೆ.ವಾ ವಿದ್ಯುತ್ ಉತ್ಪಾದನೆಯಾಗುವ, ಅತ್ಯಂತ ಕಡಿಮೆ ಪ್ರಮಾಣದಲ್ಲಿ ಅರಣ್ಯನಾಶ ಮತ್ತು ಭೂ ಪ್ರದೇಶದ ಬಳಕೆಯಾಗಿರುವ ಕಿರು ವಿದ್ಯುತ್ ಯೋಜನೆ) ಮಳೆಗಾಲದಲ್ಲಿ ತುಂಬಿ ಹರಿಯುವಾಗ ಮಾತ್ರ ಕೆಂಪಾಗಿರುತ್ತಿದ್ದ ಕೆಂಪುಹೊಳೆ ವರ್ಷವಿಡೀ ಮಣ್ಣು ತುಂಬಿ ಕೆಸರು ಕೆಸರಾಗಿ ಕೆಂಪಾಗಿ ಹರಿಯುತ್ತಿದೆ. ಹೀಗಿದ್ದರೆ ಗಾತ್ರದಲ್ಲಿ ಇದರ ನೂರುಪಾಲಿಗೂ ಹೆಚ್ಚು ಜಲ ಸಂಗ್ರಹವಾಗುವ (೫೨ ಚ.ಕೀ) ಮತ್ತು ವಿದ್ಯುತ್ ಉತ್ಪಾದನೆಯಲ್ಲಿ ಮಾತ್ರ ಕೆಂಪುಹೊಳೆ ಯೋಜನೆಯ ಹತ್ತರಷ್ಟಿರುವ(೨೦೦ಮೆ.ವಾ) ಗುಂಡ್ಯ ಯೋಜನೆಯಲ್ಲಿ ಆಗಬಹುದಾದ ವಿನಾಶವನ್ನು ಊಹಿಸಿ (ಗಾತ್ರ ಹೆಚ್ಚಾದ ಪ್ರಮಾಣಕ್ಕೆ ವಿದ್ಯುತ್ ಉತ್ಪಾದನೆ ಹೆಚ್ಚುವುದಿಲ್ಲವೆಂಬುದನ್ನೂ ಗಮನಿಸಿ)

ಮಹಾ ಜೀವವೈವಿಧ್ಯದ ತಾಣವಾಗಿರುವ ಪಶ್ಚಿಮ ಘಟ್ಟಗಳೇ ದಕ್ಷಿಣಭಾರತ ಎಲ್ಲ ನದಿಗಳ ಪ್ರಾಣ ಎಂಬುದನ್ನು ಮರೆತು ಇವನ್ನೆಲ್ಲ ನಾಶಮಾಡಿದರೆ ಪಶ್ಚಿಮಕ್ಕೋ ಪೂರ್ವಕ್ಕೋ ಹರಿಯಲು ನದಿಗಳೇ ಇರುವುದಿಲ್ಲವೆಂಬುದನ್ನು ನಾವೆಲ್ಲರೂ ಅರಿತುಕೊಳ್ಳಬೇಕಾಗಿದೆ.

ಇದೀಗ ವೈಜ್ಞಾನಿಕವಾಗಿ ನದೀ ನೀರಿನ ಬಳಕೆಯ ಮಾತು ಕೇಳಿಬರುತ್ತಿದೆ. ಇದೀಗ ತಾನೇ ಗುಂಡ್ಯ ಯೋಜನೆಯ ಪ್ರದೇಶಕ್ಕೆ ಬಂದುಹೋದ ತಜ್ಞರ ಸಮಿತಿಯ ಸದಸ್ಯರೂ ಇದೇ ಮಾತನ್ನು ಹೇಳಿದರು. ಇವರೆಲ್ಲ ಹೇಳುವ ವೈಜ್ಞಾನಿಕ ವಿಧಾನಗಳೆಂದರೆ ಎಲ್ಲ ಯೋಜನೆಗಳಿಂದಾಗುವ ಹಾನಿಯನ್ನು ಕಡಿಮೆ ಮಾಡುವುದು, ಮರಗಿಡಗಳನ್ನು ಬೆಳೆಸುವುದು. ಜೊತೆಗೆ ಈ ಯೋಜನೆಗಳ ಅನಿವಾರ್ಯತೆಯನ್ನು ಜನರಿಗೆ 'ಮನವರಿಕೆ ಮಾಡಿಕೊಡುವುದು' ಈ ರೀತಿಯ ಕೆಲಸಗಳಿಗೆ ಸೀಮಿತವಾಗುತ್ತಿದೆ. ಆದರೆ ಈ ರೀತಿಯ ಯಾವುದೇ ಸಮಸ್ಯೆಗೆ ಸಮಗ್ರವಾದ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಆದ್ಯತೆಗಳು, ನಿಲುವುಗಳು, ಮತ್ತು ನಮ್ಮ ಕೃಷಿ ವ್ಯವಸ್ಥೆಯಲ್ಲಾಗಬೇಕಾದ ಅಮೂಲಾಗ್ರ ಬದಲಾವಣೆಗಳು, ಇವುಗಳನ್ನೆಲ್ಲವನ್ನು ಒಳಗೊಂಡಂತೆ ವೈಜ್ಞಾನಿಕವಾದ ಪರಿಹಾರವನ್ನು ಕಂಡುಕೊಳ್ಳದಿದ್ದಲ್ಲಿ ನಾವು ಸಮಸ್ಯೆಯಿಂದ ಸಮಸ್ಯೆಗೆ ಸಾಗುತ್ತಲೇ ಇರುತ್ತೇವೆ ಹೊರತು ಪರಿಹಾರವೆನ್ನುವುದು ಮರೀಚಿಕೆಯಾದೀತು.

ಈಗ ವೈಜ್ಞಾನಿಕವೆನ್ನಬಹುದಾದ ಹಲವು ಪರಿಹಾರಗಳನ್ನು ಗಮನಿಸೋಣ ಮೊದಲನೆಯದಾಗಿ ನಮ್ಮ ಕೃಷಿ ಪದ್ಧತಿ. ಅಗತ್ಯವಿಲ್ಲದೆ ಅಗಾಧ ಪ್ರಮಾಣದಲ್ಲಿ ನೀರನ್ನು ಬಳಸುತ್ತಿರುವ ಭತ್ತ, ಕಬ್ಬಿನಂತಹ ಕೆಲವು ಬೆಳೆಗಳ ಬೇಸಾಯ ವಿಧಾನವನ್ನು ಬದಲಿಸಿಕೊಂಡರೆ ಈಗ ಉಪಯೋಗಿಸುತ್ತಿರುವ ನೀರಿನಲ್ಲೇ ಎರಡರಷ್ಟು ಪ್ರದೇಶದಲ್ಲಿ ಬೆಳೆ ತೆಗೆಯಬಹುದು. ಹಾಗೇ ಉದ್ಯಮಗಳಲ್ಲೂ ಅಷ್ಟೆ ಸರ್ಕಾರಿ ಅಂಕಿ ಅಂಶಗಳ ಪ್ರಕಾರವೇ ಪೋಲಾಗುವ ನೀರಿನ ಪ್ರಮಾಣ ಶೇಕಡ ನಲುವತ್ತರಷ್ಟಿದೆ. ನಗರಗಳ ಬಂಗಲೆಗಳಲ್ಲಿ ದುಂದುವೆಚ್ಚ ಮಾಡುತ್ತಿರುವ ನೀರನ್ನು ನೋಡಿ. ಸಾಮಾನ್ಯವಾಗಿ ನಾವು ಕಂಡಂತೆ ಪ್ರತಿ ಎರಡು ಅಥವಾ ಮೂರು ವರ್ಷಗಳಿಗೊಮ್ಮೆಯಾದರೂ ನದಿಗಳಲ್ಲಿ ಪ್ರವಾಹ ಬಂದು ಅಪಾರ ಹಾನಿಯಾಗತ್ತದೆ. ಪ್ರವಾಹ ಕಾಲದ ನೀರನ್ನು ಸಂಗ್ರಹಿಸಿಡಲು ಸಾಧ್ಯವಾದರೆ (ಕೆರೆಗಳಲ್ಲಿ ಅಥವಾ ನದಿಯೇ ಇಲ್ಲದ ಸ್ಥಳದಲ್ಲಿ ಸಣ್ಣ ಸಣ್ಣ ಅಣೆಕಟ್ಟುಗಳನ್ನು ಕಟ್ಟಿ ಅಲ್ಲಿಗೆ ನೀರನ್ನು ಹಾಯಿಸಿಡುವ ಮೂಲಕ) ಅದೇ ಸುಮಾರು ಒಂದು ವರ್ಷದ ಬಳಕೆಗೆ ಸಾಕಾಗುತ್ತದೆ. ಹಾಗೇ ಮಳೆನೀರಿನ ಸಂಗ್ರಹವಂತೂ ಮಾಡಲೇಬೇಕಾದ ಕೆಲಸ. ಈ ರೀತಿಯ ಯೋಜನೆಗಳಿಂದಲೇ ನಮ್ಮ ಕೃಷಿ ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಸಾಧ್ಯವಿದೆ.

ವಿದ್ಯುತ್ ಉತ್ಪಾದನೆಯ ವಿಚಾರಕ್ಕೆ ಬಂದರೆ ಯೋಜನೆ ಗಾತ್ರ ಹೆಚ್ಚಾದಷ್ಟೂ ಅದರಿಂದ ಉತ್ಪಾದನೆಯಾಗುವ ವಿದ್ಯುತ್ ಪ್ರಮಾಣ ಕಡಿಮೆಯೆಂದು ಈಗಾಗಲೇ ನಮ್ಮ ಅನುಭವಕ್ಕೆ ಬಂದಿರುವ ವಿಚಾರವಾಗಿದೆ. ಅದಕ್ಕೆ ಬೇಕಾದ ಬಂಡವಾಳ ಮತ್ತು ಅದರಿಂದ ಆಗುವ ಪರಿಸರಹಾನಿಯನ್ನು ಗಣನೆಗೆ ತೆಗೆದುಕೊಂಡರೆ ಸಣ್ಣಯೋಜನೆಗಳೇ ಹೆಚ್ಚು ಉಪಯುಕ್ತವಾದವುಗಳು. ಈ ಬಗ್ಗೆ ಅನೇಕರು ಸಾಕಷ್ಟು ಪ್ರಯೋಗಗಳನ್ನು ಕೂಡಾ ನಡೆಸಿದ್ದಾರೆ. ಪಶ್ಚಿಮ ಘಟ್ಟಗಳ ಕಾಪಿಡಬೇಕಾದ ಅರಣ್ಯ-ಭರಿತ ಪ್ರದೇಶಗಳನ್ನು ಹಾಗೇ ಉಳಿಸಿಕೊಂಡರೂ ಸಹ ಉಳಿದ ಮಲೆನಾಡಿನ ಪ್ರದೇಶದಲ್ಲಿ ಆರ್ಧ ಕಿ.ವಾ. ದಿಂದ ಹಿಡಿದು ಹತ್ತು ಕಿ.ವಾ ತನಕ ಮಳೆಗಾಲದಲ್ಲಿ ಮಾತ್ರ ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯವಿರುವ ಸಾವಿರಾರು ತಾಣಗಳಿವೆ. ಇವುಗಳನ್ನು ಉಪಯೋಗಿಸಿಕೊಂಡರೂ ನೂರಾರು ಮೆ.ವಾ.ವಿದ್ಯುತ್ ಉಳಿತಾಯವಾಗುತ್ತದೆ.

(ಮಲೆನಾಡಿನಲ್ಲೂ ಮಳೆಗಾಲದಲ್ಲಿ ಕೂಡಾ ಕುಡಿಯುವ ನೀರಿಗಾಗಿ ವಿದ್ಯುತ್ ಪಂಪಿನ ಬಳಕೆ ವ್ಯಾಪಕವಾಗಿದೆ). ಹಾಗೇ ಈಗ ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನಲ್ಲಿ ಪೋಲಾಗುತ್ತಿರುವ ಪ್ರಮಾಣವನ್ನು ಕಡಿಮೆಮಾಡುವುದೂ ಸೇರಿದಂತೆ ಇತರೇ ಮಾರ್ಗಗಳನ್ನು ಹುಡುಕಬೇಕಾಗಿದೆ. ಸೌರಶಕ್ತಿಯ ಬಳಕೆಯೂ ಈಗೀಗ ಸ್ವಲ್ಪಮಟ್ಟಿಗೆ ಜನಪ್ರಿಯವಾಗುತ್ತಿದೆ.

ಆದರೆ ನಿಜವಾದ ತೊಂದರೆಯಿರುವುದು ಮಾರುಕಟ್ಟೆ ಸಂಸ್ಕೃತಿಯು ಹೇರುತ್ತಿರುವ ಕೊಳ್ಳುಬಾಕತನದ ಏಕರೂಪದ-ಉತ್ಪಾದನೆ ಆಧಾರಿತ ಬೃಹತ್ ಯೋಜನೆಗಳಿಂದ ಮತ್ತು ಆಧುನಿಕವೆಂದು ಕರೆಯಲಾಗುವ ಕೃಷಿ ಪದ್ಧತಿಗಳಿಂದ (ಆಧುನಿಕ-ಮಿಶ್ರತಳಿಗಳ ಹೈನೋದ್ಯಮಕ್ಕೂ ಹೆಚ್ಚು ನೀರು ಬೇಕು) ಇದಕ್ಕೆ ಬದಲಾಗಿ ಕೃಷಿಯಲ್ಲಿ ಹೇಗೋ ಹಾಗೆ ನಮ್ಮ ಬದುಕಿಗೆ ಸಂಬಂಧಪಟ್ಟಂತೆ ಸಹಜ ಸುಸ್ಥಿರ ಪದ್ಧತಿಗಳ ಅಳವಡಿಕೆ ಮಾತ್ರ ನಮ್ಮನ್ನು ಕಾಪಾಡಬಲ್ಲದು. ನಮ್ಮೆಲ್ಲ ಸಾಂಸ್ಕೃತಿಕ-ಸಾಮಾಜಿಕ, ಭಿನ್ನತೆ-ಪ್ರಾದೇಶಿಕತೆಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಂದು ಪ್ರದೇಶಕ್ಕನುಗುಣವಾಗಿ, ಸ್ಥಳೀಯ ಅನುಭವ-ಪ್ರಯೋಗಗಳ ಮೂಲಕ ಆಧುನಿಕ ವಿಜ್ಞಾನದ ಕೊಡುಗೆಗಳನ್ನು ಪೂರ್ಣನಿರಾಕರಿಸದೆ (ಅದು ಅವಾಸ್ತವ ಕೂಡಾ) ನಮ್ಮ ಇಂದಿನ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಧ್ಯವಿರುವ ಎಲ್ಲ ಮಾರ್ಗಗಳನ್ನು ಕಂಡುಕೊಳ್ಳಬೇಕಿದೆ. ಇದಕ್ಕೆ ಬೇಕಾಗಿರುವುದು ಪ್ರಬಲ ರಾಜಕೀಯ ಇಚ್ಛಾಶಕ್ತಿ ಮತ್ತು ದೂರದೃಷ್ಟಿಯುಳ್ಳ ನಾಯಕತ್ವ. ಇದಕ್ಕೆ ನಮಗಿರುವುದು ಒಂದೇ ದಾರಿ- ನಮ್ಮ ಪ್ರಜಾಪ್ರಭುತ್ವ. ಅದನ್ನು ಉಳಿಸಿಕೊಂಡೂ ಸತತ ಎಚ್ಚರ ಮತ್ತು ನಿರಂತರ ಹೋರಾಟಗಳ ಮೂಲಕವೇ ನಾವು ನಮ್ಮ ನೆಲ ಜಲ ಮತ್ತು ಜೀವವನ್ನು ಉಳಿಸಿಕೊಳ್ಳಬೇಕಾಗಿದೆ.

* * *

ಇಂದು ಜನರೊಂದಿಗಿರುವ ಸಮಸ್ಯೆಯೇನೆಂದರೆ ಅವರಲ್ಲಿ ಬಹಳಷ್ಟು ಜನರು ತಮ್ಮ ದೈನಂದಿನ ವ್ಯವಹಾರಗಳಲ್ಲಿ ಜೀವರಹಿತವಾದ ಮತ್ತು ಅಷ್ಟೇನು ಸುಂದರವಲ್ಲದ ಕೃತಕ ವಸ್ತುಗಳೊಂದಿಗೆ ವ್ಯವಹರಿಸುತ್ತಾರೆ. ಆ ವಸ್ತುಗಳು ಗೌರವಾದರ ಭಯವನ್ನು ಹುಟ್ಟಿಸುವುದಿಲ್ಲ. ಆದ್ದರಿಂದಲೇ ಬಹಳಷ್ಟು ಜನರು ಜೀವಿಸುವ ಪ್ರಾಣಿಗಳೊಂದಿಗೆ ಮತ್ತು ಸಜೀವ ವ್ಯವಸ್ಥೆಗಳೊಂದಿಗೆ ಹೇಗೆ ಜೀವಿಸಬೇಕೆಂಬುದನ್ನು ಮರೆತಿದ್ದಾರೆ.

– ಕೊನ್ರಾಡ್ ಲೊರೆಂಝ

ಅಪೂರ್ಣ ಕ್ರಾಂತಿಗಳು ಮತ್ತು ನಾವು

– *ಪ್ರಸನ್ನ*

ನನ್ನ ಅಭಿಪ್ರಾಯದಲ್ಲಿ ಭ್ರಷ್ಟಾಚಾರ ನಿರ್ಮೂಲನೆಗೆ, ಅದರ ಅಗತ್ಯಕ್ಕಿಂತ ಹೆಚ್ಚಿನ ಆದ್ಯತೆಯನ್ನು ನೀಡುವುದು ಒಳ್ಳೆಯದಲ್ಲ. ಏಕೆಂದು ವಿವರಿಸುತ್ತೇನೆ. ಭ್ರಷ್ಟಾಚಾರವೆಂಬುದು ಮೂಲ ಕಾಯಿಲೆಯಲ್ಲ, ಅಸಮಾನತೆ ಎಂಬ ಕಾಯಿಲೆಯ ಮೂಲ ಮೇಲ್ಮೈ ಲಕ್ಷಣ ಮಾತ್ರವೇ ಅದು. ಸಮಾಜದಲ್ಲಿ ಮನೆಮಾಡಿರುವ ಅಸಮಾನತೆ ಇತ್ತೀಚಿನ ದಶಕಗಳಲ್ಲಿ–ದುಡ್ಡಿರುವವರು–ಇಲ್ಲದವರು, ರಾಜಕೀಯ ಶಕ್ತಿ ಇರುವವರು–ಇಲ್ಲದವರು, ಜಾತಿಬಲ ಇರುವವರು–ಇಲ್ಲದವರು, ಬಹುಸಂಖ್ಯಾತ ಧರ್ಮವೊಂದರ ಬೆಂಬಲ ಇರುವವರು–ಇಲ್ಲದವರು, ಕಾರ್ಖಾನೆ ಗಣಿಗಾರಿಕೆ ಭೂಮಿಕಾಣಿ ವ್ಯವಸಾಯ ಇತ್ಯಾದಿಗಳು ಲಭ್ಯವಿರುವವರು–ಇಲ್ಲದವರು, ಇಂಗ್ಲೀಷು ಬಲ್ಲವರು–ಬಾರದವರು, ವಿದ್ಯೆಯಿರುವವರು–ಇಲ್ಲದರವರು ಇವರ ನಡುವಿನ ಅಂತರವು ಅಪಾರವಾಗಿ ಬೆಳೆಯುತ್ತಿದೆ. ಅಸಾಮಾನತೆಯನ್ನು ನಾವು ಬೆಳೆಯಲಿಕ್ಕೆ ಬಿಟ್ಟಿದ್ದೇವೆ ಮಾತ್ರವಲ್ಲ, ಅಸಮಾನತೆಯ ಸಂಕೇತಗಳನ್ನು ಹೆಮ್ಮೆಯಿಂದ ವಿಜೃಂಭಿಸತೊಡಗಿದ್ದೇವೆ. ಹಾಗಾಗಿ ಮೂಲ ಕಾಯಿಲೆಯು ಉಲ್ಬಣಗೊಂಡಿದೆ. ಪರಿಣಾಮ ಸ್ವರೂಪವಾಗಿ ಭ್ರಷ್ಟಾಚಾರವೆಂಬ ವ್ರಣವು ಒಡೆದು ಕೀವಾಗಿ ದುರ್ನಾತ ಬೀರುತ್ತಿದೆ. ನಾವು ದುರ್ನಾತಕ್ಕೆ ಹೆದರಿದ್ದೇವೆ.

ಅಸಮಾನತೆಯೇ ಇಲ್ಲದ ಸಮಾಜವೆಂಬುದು ಒಂದು ಆದರ್ಶ ಮಾತ್ರ. ಈ ಸಂಗತಿಯನ್ನು ಸಮತಾವಾದವನ್ನು ರೂಪಿಸಿದ ಏಂಗೆಲ್ಸ್ ಕೂಡ ಮನಗಂಡಿದ್ದ ಹಾಗೂ ಆ ಬಗ್ಗೆ ಬರೆದಿದ್ದ. ಸ್ವಲ್ಪ ಮಟ್ಟಿಗಿನ ಅಸಮಾನತೆಯು ಎಲ್ಲಾ ಸಮಾಜಗಳಿಗೂ ಅನಿವಾರ್ಯ, ಹಾಗೆಂದೇ ಸಮಾಜಗಳೂ ಅಸಮಾನತೆಯ ಮಟ್ಟ ಎಷ್ಟಿರಬೇಕೆಂದು ನಿರ್ಧರಿಸಿ ಗಡಿ ಗುರುತಿಸಿ, ಲಕ್ಷಣ ರೇಖೆಯೊಂದನ್ನು ಎಳೆಯುತ್ತವೆ. ಬೇರೆ ಬೇರೆ ಸಮಾಜಗಳು ಬೇರೆ ಬೇರೆ ಪ್ರಮಾಣಗಳನ್ನು ಗುರುತಿಸುತ್ತವೆ. ಅಮೇರಿಕೆ, ಜಪಾನ್ ಇತ್ಯಾದಿ ದೇಶಗಳು ಮಿತಿಮೀರಿದ ಆರ್ಥಿಕ ಅಸಮಾನತೆಯನ್ನು ಸಹ ಒಪ್ಪಿಕೊಳ್ಳುತ್ತವೆ. ಅವರ ರೀತಿನೀತಿಗಳು ಇತರ ದೇಶಗಳಿಗೂ ಹರಡಿದೆ. ಸಮಾನತೆಯೆಂಬ ಸಮಾತಾವದಿಯೆಂಬ ಪದವನ್ನು ತೆಗೆದು ಅದರ ಜಾಗದಲ್ಲಿ ಆರ್ಥಿಕ ಪ್ರಗತಿ ಎಂಬ ಎಡಬಿಡಂಗಿ ಪದವೊಂದನ್ನು ಕೂರಿಸಿದ್ದೇವೆ ನಾವು. ಸಮತಾವಾದಿ ದೇಶಗಳು ಸೋತು ಉರುಳಿದ ನಂತರ, ಅಮೇರಿಕೆ ಹಾಗು ಜಪಾನುಗಳ ಮಾದರಿಯಂತೂ ತುಂಬಾ ಜನಪ್ರಿಯವಾಗಿದೆ. ಭಾರತವೂ ಈ ಬೆಳವಣಿಗೆಯಿಂದ ಹೊರತಾದದ್ದೇನಿಲ್ಲ. ಅದೇನೇ ಇರಲಿ, ಅಮೇರಿಕ, ಜಪಾನ್ ಮುಂತಾದ ದೇಶಗಳಲ್ಲಿ ಭ್ರಷ್ಟಾಚಾರ ಕಡಿಮೆಯಿದೆಯಲ್ಲ ಅದು ಹೇಗೆ ಎಂದು ಪ್ರಶ್ನಿಸುತ್ತಾರೆ ಹಲವರು.

ಭ್ರಷ್ಟಾಚಾರವೆಂದರೇನು? ಸಾರ್ವಜನಿಕ ಹಿತಾಸಕ್ತಿಯಿಂದ ಮಾಡಿಕೊಂಡ ಕಾನೂನೊಂದನ್ನು ವೈಯಕ್ತಿಕ ಲಾಭದ ಕಾರಣಕ್ಕಾಗಿ ಮುರಿದರೆ ಅಂತಹ ಪ್ರಸಂಗಗಳನ್ನು ಭ್ರಷ್ಟಾಚಾರದ ಪ್ರಸಂಗಗಳು ಎಂದು ಕರೆಯುತ್ತೇವೆ. ಕಾನೂನಿನ ಉಲ್ಲಂಘನೆಯು ಭಾರತದಲ್ಲಿ ಅಧಿಕವಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಭಾರತದ ಸಮಸ್ಯೆ ಆರ್ಥಿಕ ಪ್ರಗತಿಯದ್ದು ಮಾತ್ರವೇ ಅಲ್ಲ. ನಮ್ಮದು ಸಾಮಾಜಿಕ ಒಕ್ಕೂಟ ವ್ಯವಸ್ಥೆಯ ಸಮರ್ಥ ನಿರ್ವಹಣೆಯ ಸಮಸ್ಯೆಯೂ ಹೌದು. ಒಂದು ದೇಶದಲ್ಲಿ ಸಾರ್ವಜನಿಕವೆಂಬುದೇ ಅಪೂರ್ಣವಾದಾಗ–ನಮ್ಮ ದೇಶದಲ್ಲಿ ಈಗ ಆಗಿರುವಂತೆ, ಅಪೂರ್ಣತೆ ಒಳಒಡಕುಗಳು ಸೃಷ್ಟಿಯಾಗುತ್ತವೆ. ಒಳಒಡಕುಗಳು ಪರಸ್ಪರ ಕಿತ್ತಾಡತೊಡಗುತ್ತವೆ. ಸಾಮಾಜಿಕ ಅಸ್ಥಿರತೆಯ ಇಂತಹ ಸಂದರ್ಭಗಳಲ್ಲಿ ಆರ್ಥಿಕ ಅಸಮಾನತೆಯನ್ನು ವೈಭವೀಕರಿಸುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದೆಂದರೆ ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ, ಅಪಾಯವು ಕಟ್ಟಿಟ್ಟ ಬುತ್ತಿ. ನಮ್ಮ ದೇಶದಲ್ಲಿ ಆಗಿರುವುದೂ ಅದೇ.

ಅಣ್ಣಾ ಹಜಾರೆಯವರಿಗೆ ಇವೆಲ್ಲ ಸಂಗತಿಗಳ ಬಗ್ಗೆ ಅರಿವಿದೆ ಎಂದು ನಾನು ನಂಬುತ್ತೇನೆ. ಈ ವರೆಗಿನ ಅವರ ಸರಳ ಜೀವನಶೈಲಿ ಹಾಗು ಸಾಮಾಜಿಕ ಕೆಲಸಗಳು ಅವರ ಅರಿವಿಗೆ ಪುರಾವೆಗಳು. ಆರ್ಥಿಕ ಅಸಮಾನತೆಯ ಅಗತ್ಯವೇ ಬೀಳದಂತಹ ಸರಳ ಜೀವನಕ್ಕೆ ತನ್ನನ್ನು ಒಗ್ಗಿಸಿಕೊಂಡವರು ಅಣ್ಣಾ ಹಜಾರೆ, ಹಳ್ಳಿಗಳಲ್ಲಿ ಸಾಮಾಜಿಕ ವೈರುಧ್ಯಗಳ ನಡುವೆ ಕೆಲಸಮಾಡಿ ಅನುಭವವಿರುವವರು ಅವರು. ಆದರೆ ಇದೇ ಮಾತನ್ನು ಚಳುವಳಿಯ ಬೆಂಬಲಿಗರು ಹಾಗೂ ಮುಂಚೂಣಿ ನಾಯಕರ ಬಗ್ಗೆ ಹೇಳಲು ಬರುವುದಿಲ್ಲ. ಹಾಗೆಂದು ಅವರೆಲ್ಲ ಭ್ರಷ್ಟರೆಂದು ನನ್ನ ಮಾತಿನ ಅರ್ಥವಲ್ಲ. ಅವರೆಲ್ಲರೂ ಮಧ್ಯಮ, ಮೇಲ್ಮಧ್ಯಮ ಹಾಗೂ ಶ್ರೀಮಂತ ವರ್ಗಗಳಿಂದ ಬಂದವರು. ಅಸಮಾನತೆಯನ್ನು ವಿಜೃಂಭಿಸುವ ಸಿದ್ಧಾಂತಗಳಿಗೆ ಮಾರು ಹೋದವರು ಅವರು. ಬಂಡವಾಳಶಾಹಿ ಸಿದ್ಧಾಂತವನ್ನು ಖಡಾಖಂಡಿತವಾಗಿ ತಿರಸ್ಕರಿಸಿದವರಂತೂ ಅಲ್ಲ ಹೆಚ್ಚಿನವರು. ಅಥವಾ ಗಾಂಧೀಜಿಯವರಂತೆ ಸರಳ ಜೀವನದ ತತ್ವಕ್ಕೆ ಬದ್ಧರಾದವರೂ ಅಲ್ಲ. ಕಾನೂನಿನ ಚೌಕಟ್ಟಿನೊಳಗೆ ಮತ್ತಷ್ಟು ಶ್ರೀಮಂತಿಕೆಯನ್ನು ಸಂಚಯಿಸಲಿಕ್ಕೆ ಸಾಧ್ಯವಾಗುವುದಾದರೆ ಸಂಚಯಿಸಲಿಕ್ಕೆ ಇಷ್ಟಪಡುವವರು ಅವರು; ಹಲವು ಕಾರುಗಳು, ಹಲವು ಬಂಗಲೆಗಳು, ಹಣಕಾಸು, ಅನಿರ್ಬಂಧಿತ ಪ್ರವಾಸ, ಅನಿರ್ಬಂಧಿತ ಸುಖ ದೊರಕಲಿ ಎಂದು ಬಯಸುವವರು. ಸರಳವಾಗಿ ಹೇಳಬೇಕೆಂದರೆ ಅಣ್ಣಾ ಹಜಾರೆಯವರ ಬೆಂಬಲಿಗರಲ್ಲಿ ಹೆಚ್ಚಿನವರು ಅಸಮಾನತೆ ಎಂಬ ಮೂಲ ಕಾಯಿಲೆಯನ್ನು ವಾಸಿಮಾಡಲಿಕ್ಕೆ ಹೊರಟವರಲ್ಲ. ಮಾತ್ರವಲ್ಲ. ಅದು ಇರಬೇಕು ಆದರೂ ರೋಗಲಕ್ಷಣವು ಕಡಿಮೆಯಾಗಬೇಕು ಎಂದು ಬಯಸುವವರು ಇವರು. ಆದರೆ ಕಾನೂನಿನ ಚೌಕಟ್ಟಿನೊಳಗೇ ಆಗಲಿ ಅಥವಾ ಹೊರಗೇ ಆಗಲಿ, ಅಸಮಾನತೆಯನ್ನು ಅನಿರ್ಬಂಧಿತವಾಗಿ ಬೆಳೆಸಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದು ಸಾಧ್ಯವಿಲ್ಲ. ಅಮೇರಿಕೆ ಹಾಗೂ

ಜಪಾನುಗಳು ಈ ಕೆಲಸಮಾಡಿವೆ ಎಂದು ನನಗನಿಸುತ್ತಿಲ್ಲ. ಗ್ರೇಟ್ ಡಿಪ್ರೆಷನ್ ಕಾಲದ ಅಮೇರಿಕೆಯ ಕಥೆಗಳನ್ನು ನಾವು ಕೇಳಿಲ್ಲವೇ, ಅಥವಾ ಗಾಡ್ ಫಾದರ್ ಮಾದರಿಯ ಸಿನೆಮಾಗಳನ್ನು ನೋಡಿಲ್ಲವೇ, ಭ್ರಷ್ಟಾಚಾರದ ಹೊಣೆಹೊತ್ತು ರಾಜೀನಾಮೆ ನೀಡಿದ ಜಪಾನಿನ ಪ್ರಧಾನಮಂತ್ರಿ ನಮ್ಮ ನೆನೆಪಿನಿಂದ ಮರೆಯಾದನೇ? ಆದರೆ ಚಳುವಳಿಗಳು ಹುಟ್ಟುವುದೇ ಹೀಗೆ. ತತ್‌ಕ್ಷಣದ ಜರೂರಿನಿಂದಾಗಿಯೇ ಅವು ಮೇಲೆದ್ದು ಬರುತ್ತವೆ. ಅಂದಮಾತ್ರಕ್ಕೆ ಅವುಗಳನ್ನು ಅನುಮಾನದಿಂದ ನೋಡಬೇಕಾಗಿಲ್ಲ. ಈ ಚಳುವಳಿಯು ತತ್‌ಕ್ಷಣದ ಜರೂರನ್ನು ಮೀರಿ ಮೂಲ ಕಾಯಿಲೆಯತ್ತ ಗಮನ ಹರಿಸಬಾರದು ಎಂದೇನಿಲ್ಲ. ಅನೇಕ ಚಳುವಳಿಗಳು ಹಾಗೆ ಬೆಳೆದ ಉದಾಹರಣೆಗಳು ನಮ್ಮ ಮುಂದಿವೆ. ಅಣ್ಣಾ ಹಜಾರೆಯವರ ಚಳುವಳಿ, ತತ್‌ಕ್ಷಣದ ಜರೂರನ್ನು ಮೀರಿ ಬೆಳೆಯುವುದು ಹೇಗೆ ಸಾಧ್ಯವಾಯಿತು? ಉತ್ತರ ಸರಳವಿದೆ. ಚಳುವಳಿಗಾರರನ್ನು ಅಣ್ಣಾ ಅವರು ತಮ್ಮ ಜೀವನಶೈಲಿಯ ಕಡೆಗೆ ಎಳೆಯ ಬೇಕೇ ಹೊರತು, ಚಳುವಳಿಗಾರರು ಅಣ್ಣಾ ಅವರನ್ನು ಕಾನೂನಿನ ಸಮರವೆಂಬ ಚಕ್ರವ್ಯೂಹದಲ್ಲಿ ಎಳೆದು ಕೂರಿಸುವುದಲ್ಲ. ಆದರಿದು ಸಾಧ್ಯವಾದೀತೆ?

ಚಳುವಳಿಗೆ ಬೆಂಬಲ ನೀಡುತ್ತಿರುವವರ ಪಟ್ಟಿಯನ್ನೇ ಗಮನಿಸಿ! ಪಟ್ಟಿಯ ಅಗ್ರಸ್ಥಾನದಲ್ಲಿರುವುದು ಅಮೇರಿಕಾ ದೇಶ. ಅನಂತರದಲ್ಲಿದ್ದಾರೆ ಬೃಹತ್ ಕೈಗಾರಿಕೋದ್ಯಮಿಗಳು, ನಂತರದಲ್ಲಿ–ಕಾಂಗ್ರೆಸ್ಸನ್ನು ಹೊರತುಪಡಿಸಿದಂತೆ, ಭಾರತದ ಸಮಸ್ತ ರಾಜಕೀಯ ಪಕ್ಷಗಳು, ಅಂತರರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಶ್ರೀಮಂತ ನೌಕರರು, ಅಧಿಕಾರಿಗಳು, ಚಲನಚಿತ್ರತಾರೆಯರು, ನಿರ್ಮಾಪಕರೂ ಇದ್ದಾರೆ. ಪಟ್ಟಿಯ ಕೊನೆಯಲ್ಲಿ ಗಣನೀಯ ಪ್ರಮಾಣದಲ್ಲಿ ಬೆಳೆದಿರುವ ಈ ದೇಶದ ಮಧ್ಯಮವರ್ಗ ನಿಂತಿದೆ.

ಒಂದಲ್ಲಾ ಒಂದು ಸಂದರ್ಭದಲ್ಲಿ ಇವರೆಲ್ಲರೂ ಲಂಚ ನೀಡಿದ್ದಾರೆ. ಒಂದಲ್ಲಾ ಒಂದು ಸಂದರ್ಭದಲ್ಲಿ ತಮ್ಮ ಆಸ್ತಿ ಸಂಚಯನಕ್ಕಾಗಿ ಕಾನೂನನ್ನು ಒಂದಷ್ಟು ತಿರುಚಿ ಅಧಿಕಾರದ ಉಪಯೋಗ ಪಡೆದುಕೊಂಡಿದ್ದಾರೆ. ಈ ದೇಶದ ರೈತಕಾರ್ಮಿಕನೊಬ್ಬನಿಗೆ ಎದುರಾಗುವ 'ಸಂಪೂರ್ಣ ಕಾನೂನು ರಹಿತ' ಸ್ಥಿತಿಯು ಇವರಲ್ಲಿ ಯಾರನ್ನು ಕಾಡಿಸಿಲ್ಲ ಮಾತ್ರವಲ್ಲ ಇವರ ಸಮರದಿಂದಾಗಿ ಸಂಪೂರ್ಣ ಕಾನೂನು ರಹಿತ ಸ್ಥಿತಿಯಲ್ಲಿರುವ ಸಮುದಾಯಗಳಿಗೆ ಹೆಚ್ಚಿನ ಉಪಯೋಗವಾಗುವುದಿಲ್ಲ. ಮಧ್ಯವರ್ತಿಗಳ ಯುಗವಿದು. ಮಧ್ಯವರ್ತಿಗಳು ಕೆಲಸಮಾಡುವುದೇ ಲಂಚದ ಆಧಾರದ ಮೇಲೆಂದು ನಮಗೆ ತಿಳಿದಿಲ್ಲವೇ? ಮಧ್ಯವರ್ತಿ ಸಂಸ್ಥೆಗಳನ್ನು ಕಳಚಲಿಕ್ಕೆ ನಾವಿಂದು ಸಿದ್ಧರಿದ್ದೇವೆಯೇ? ಉದಾಹರಣೆಗೆ ಬಾಯಾರಿಕೆ ಉದ್ಯೋಗವು ಗಾಂಧೀಜಿಯವರಿಗೆ ಅನೈತಿಕ ಮಧ್ಯವರ್ತಿ ಉದ್ಯೋಗವಾಗಿ ಕಂಡಿತ್ತು. ಅಮೇರಿಕೆ ಭ್ರಷ್ಟಾಚಾರ ನಿರ್ಮೂಲನೆ ಮಾಡಿರುವುದು ಮಧ್ಯವರ್ತಿ ಸಂಸ್ಥೆಗಳ ಮೂಲಕವಾಗಿ. ಅರ್ಥಾತ್, ಭ್ರಷ್ಟತೆಯನ್ನು ಕಾನೂನು ಬದ್ಧವಾಗಿಸುವ ಮೂಲಕವಾಗಿ. ಸುಂದರವಾಗಿ ಕಾಣಬಲ್ಲ ಭಾರತಕ್ಕೂ ಸುಂದರವಾಗಿ ಇರುವ ಭಾರತಕ್ಕೂ ವ್ಯತ್ಯಾಸ

ಇದೆ. ಈಗಿನ ಚಳುವಳಿಯು ಸುಂದರವಾಗಿ ಕಾಣಬಲ್ಲ ಭಾರತಕ್ಕಾಗಿ ಹಲಬುತ್ತಿದೆ.

ಇಂದು ಹಲವು ಸ್ತರದ ವ್ಯಕ್ತಿಗಳು ಕಾನೂನನ್ನು ಮಾನ್ಯಮಾಡದೆ ಸಮಾಜದ ಹಣ ಮಾಡಲಿಕ್ಕೆ ಹೊರಟಿದ್ದಾರೆ. ಇಂಗ್ಲಿಷ್‌ನಲ್ಲಿ ಅಂಥವರನ್ನು ಅಪ್‌ಸ್ಟಾರ್ಟ್ ಎಂದು ಕರೆಯುತ್ತಾರೆ. ಕನ್ನಡದಲ್ಲಿ ನವಶ್ರೀಮಂತರು, ನವಬ್ರಾಹ್ಮಣರು..... ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಇವರನ್ನು ನಾನು ಬೆಂಬಲಿಸುತ್ತಿಲ್ಲ. ಇವರೂ ಸಹಿತ ಹಳೇ ಶ್ರೀಮಂತರಷ್ಟೇ ಅಥವಾ ಹಳೇ ಬ್ರಾಹ್ಮಣರಷ್ಟೇ ಕೊಳಕರು. ಆದರೆ ಇವರದ್ದೊಂದು ವಿಚಾರವಿದೆ. ನಾವೇ ಒದಗಿಸಿಕೊಟ್ಟ ಮಾತುಗಳವು. ಹಾಗಾಗಿ ಇವರ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ.

ನಿಮ್ಮ ಕಾನೂನು ನನ್ನ ಮಟ್ಟಿಗೆ ಕಾನೂನೇ ಅಲ್ಲ ಎಂದು ಹೇಳುತ್ತಾರೆ ಇವರು. ನನ್ನನ್ನು ತಡೆಯಲ್ಲಿಕ್ಕಾಗಿಯೇ ಮಾಡಿದ ಕಾನೂನಿದು ಎಂದು ರೇಗುತ್ತಾರೆ. ಕೆಳವರ್ಗದಿಂದ ಬಂದವರು ಕೆಳವರ್ಗಕ್ಕಾದ ಅನ್ಯಾಯಕ್ಕೆ ಪ್ರತಿಭಟನೆಯಾಗಿ ಹಣಮಾಡುತ್ತಾರೆ. ಮೇಲ್ಜಾತಿಯವರು ಕೆಳಜಾತಿಯ ಕೀಟಲೆಯನ್ನು ಸಹಿಸಲಾರದೆ ಹಣ ಮಾಡುತ್ತಾರೆ. ಅಲ್ಪಸಂಖ್ಯಾತರು ಬಹುಸಂಖ್ಯಾತರ ವಿರುದ್ಧ, ಬಹುಸಂಖ್ಯಾತರು ಅಲ್ಪಸಂಖ್ಯಾತರ ವಿರುದ್ಧ ಹಣಮಾಡುತ್ತಾರೆ. ಸಾರ್ವಜನಿಕವೆಂಬುದು ಯಾರ ಸಾರ್ವಜನಿಕ ಎಂಬುದೇ ನಮ್ಮ ದೇಶದಲ್ಲಿ ಇನ್ನೂ ಇತ್ಯರ್ಥವಾಗಿಲ್ಲ. ನಮ್ಮ ದೇಶದಲ್ಲಿ ಅಸಮಾನರು ಬೇಗಬೇಗ ಸಮಾನರಾಗಲಿಕ್ಕೆ ಹೊರಟಿದ್ದಾರೆ. ನಿಜವಾದ ಅಣ್ಣಾ ಹಜಾರೆಯವರ ಮುಂದಿರುವ ಅಗ್ನಿಪರೀಕ್ಷೆ ಇದು, ಲೋಕಜನಪಾಲ ಮಸೂದೆ ಖಂಡಿತಾ ಅಲ್ಲ ಅಥವಾ ಯು.ಪಿ.ಎ ಸರ್ಕಾರ ಕೂಡ ಅಲ್ಲ.

ಜಯಪ್ರಕಾಶ ನಾರಾಯಣರ ನೆನಪಾಗುತ್ತಿದೆ. ಸಂಪೂರ್ಣ ಕ್ರಾಂತಿಯೂ ಸಹಿತ ದಿಢೀರನೆ ಮೇಲೆದ್ದು ಬಂದ ಕ್ರಾಂತಿಯಾಗಿತ್ತು. ಅಲ್ಲಿಯೂ ಸಹಿತ ಸಭ್ಯ ವ್ಯಕ್ತಿತ್ವವೊಂದು ಮುಂಚೂಣಿಯಲ್ಲಿತ್ತು. ಅಲ್ಲಿಯೂ ಜನರು ಸಾಗರದಂತೆ ಹರಿದುಬಂದಿದ್ದರು. ಸಂಪೂರ್ಣಕ್ರಾಂತಿಯಿಂದಾಗಿ ಇಂದಿರಾ ಗಾಂಧಿ ಸೋತರು. ವಿರೋಧ ಪಕ್ಷಗಳು ಗೆದ್ದವು. ಜಯಪ್ರಕಾಶರು ದೇಹತ್ಯಾಗ ಮಾಡಿದರು. ಸಂಪೂರ್ಣ ಕ್ರಾಂತಿಯ ಕಲೆಯು ಅಪೂರ್ಣವಾಗಿ ಉಳಿಯಿತು. ಇಂದಿರಾ ಗಾಂಧಿಯನ್ನು ಸೋಲಿಸಿ ಬಂದವರು ಬಡವರ ಪರವಾದ ಹಾಗೂ ಶೋಷಣಾರಹಿತವಾದ ಆಡಳಿತವನ್ನು ನೀಡಲಿಲ್ಲ. ಪ್ರಾಯಶಃ ಈಗಲೂ ಅದೇ ಆಗಲಿದೆ, ಚರಿತ್ರೆಯ ಪುನರಾವರ್ತನೆ!

ಅಣ್ಣಾ ಹಜಾರೆಯವರು ನಿಮಿತ್ತ ಮಾತ್ರ. ಕಾಂಗ್ರೆಸ್ಸನ್ನು ಸೋಲಿಸಿ ಅಷ್ಟೇ ಭ್ರಷ್ಟವಾದ (ಹಾಗೂ ವಚನಭ್ರಷ್ಟವಾದ) ಮತ್ತೊಂದು ಪಕ್ಷ ಆಡಳಿತಕ್ಕೆ ಬರಲಿದೆ. ಆದರೆ ಈ ಬಾರಿಯದು ಅಪೂರ್ಣ ಕ್ರಾಂತಿಯಾಗದಿರಲಿ ಎಂದು ನಾನು ಬಯಸುತ್ತೇನೆ. ಮಾತ್ರವಲ್ಲ, ನನ್ನದೇ ಸಣ್ಣರೀತಿಯಲ್ಲಿ ಆ ಬಗ್ಗೆ ಪ್ರಯತ್ನ ಕೂಡ ಮಾಡಬಯಸುತ್ತೇನೆ.

(ಸಾಭಾರ : ವಿಜಯಕರ್ನಾಟಕ)

* * *

ವೇದದಲ್ಲಿಯ ಮುತ್ತುಗಳು

– *ವಿನೋಬಾ*

ಅಭ್ಯರ್ಣೇತಿ ಯನ್ನಗ್ನಂ ಭಿಶಕ್ತಿ ವಿಶ್ವಂಯತ್ ತುರಮ್
ಪ್ರೇಮಂಧಃ ಖ್ಯನ್ನಿಃ ಶ್ರೋಣೋ ಭೂತ್

ಮನುಷ್ಯ ಜಗತ್ತಿನಲ್ಲಿ ಯಾವ ಕೆಲಸಗಳನ್ನು ಮಾಡಬೇಕು? ಒಂದನೆಯದು, ಯಾರು ಬೆತ್ತಲೆ ಇದ್ದಾರೋ ಅವರಿಗೆ ಬಟ್ಟೆ ಹೊದಿಸಬೇಕು; ಎರಡನೆಯದು, ಯಾರು ಕಾಯಿಲೆಯಿಂದ್ದಾರೋ ಅವರಿಗೆ ಔಷಧಿ ಕೊಡಬೇಕು, ಅವರ ಸೇವೆಯಲ್ಲಿ ಇರಬೇಕು; ಮೂರನೆಯದು, ಯಾರು ಕುರುಡರೋ ಅವರು ನೋಡುವಂತಾಗಲು ಅವರಿಗೆ ಸಹಾಯಮಾಡಬೇಕು. ಯಾವನು ಕುಂಟನಿದ್ದಾನೋ ಅವನು ನಡೆಯುವಂತೆ ಅವನಿಗೆ ಸಹಾಯ ಮಾಡಬೇಕು. ಇವೆಲ್ಲವೂ ದೇವರಿಗೆ ಅತ್ಯಂತ ಪ್ರಿಯವಾದ ಕೆಲಸ.

* * *

ಆ ಯನ್ಮಾ ವೇನಾ ಆರೂಹನ್ನತಸ್ಯ ಏಕಮಾಸೀನಂ ಹರ್ಯತಸ್ಯ ಪೃಷ್ಠೆ
ಮನಶ್ಚಿನ್ಮೆ ಹೃದ ಆ ಪ್ರತ್ಯವೋಚತ್ ಅಚಿಕ್ರ ದಚ್ಚಿಮಂತಃ ಸಖಾಯಃ

ಪರಮ ರಮಣೀಯ ಸತ್ಯದ ಪರ್ವತದ ಮೇಲೆ ಕುಳಿತು ಅಲ್ಲಿ ಆನಂದವನ್ನು ಅನುಭವಿಸುತ್ತಿದ್ದೆ. ಒಬ್ಬನೇ ಏಕಾಂತದಲ್ಲಿ ಕುಳಿತಿದ್ದೆ. ಅಷ್ಟರಲ್ಲಿ ನನ್ನ ಹೃದಯದಿಂದ ಒಂದು ಮಾನಸಿಕ ಉದ್ಗಾರ ಹೊರಟಿತು. "ಇವರೆಲ್ಲರೂ ನನ್ನ ಶಿಶು ಮಾನಸಕರು, ಮಿತ್ರರು. ನನ್ನ ಬಳಿ ಬಂದರು ನಾನು ಸಂಸಾರದಿಂದ ಮುಕ್ತನಾಗಿ ಎತ್ತರದಲ್ಲಿ ಸತ್ಯಗಿರಿಯ ಮೇಲೆ ಕುಳಿತಿದ್ದೇನೆ. ಆದರೆ ಈ ನನ್ನ ಮಿತ್ರ ಗೃಹಸ್ಥ ಧರ್ಮೀಯರು, ಸಂಸಾರದಲ್ಲಿ ಬಿದ್ದಿರುವ ಜನರು ದುಃಖದಿಂದ ಅಳುತ್ತಿದ್ದಾರೆ. ನನ್ನ ಸಹಾಯಕ್ಕಾಗಿ ಕೂಗುತ್ತಿದ್ದಾರೆ. ನಾನಿದನ್ನು ನೋಡಿದಾಗ ನಾನು ಪರ್ವತದ ಮೇಲಿಂದ ಕೆಳಗಿಳಿದು ಬಂದು, ಸತ್ಯದ ಭೂಮಿಕೆಯನ್ನು ಬಿಡದೆ ಅವರ ಸೇವೆ ಮಾಡಬೇಕಗುತ್ತದೆ.

ಇದು ಅವತಾರದ ಕಲ್ಪನೆ. ಮಹಾಪುರುಷರು ಸಂಸಾರದಿಂದ ಮುಕ್ತರಾಗಿದ್ದರೂ ಕೂಡ ಕರುಣೆಯ ಕಾರಣದಿಂದ ಸಂಸಾರದ ಸೇವೆಯಲ್ಲಿ ತೊಡಗಿಸಿಕೊಳ್ಳಲು ಇಷ್ಟ ಪಡುತ್ತಾರೆ.

* * *

ನ ಹೀ ಮೇ ಅಸ್ತ್ಯ ಘನ್ಯಾ ನ ಸ್ವಧಿತಿರ್ವನನ್ವತಿ
ಅಥೈತಾ ದೃಗ್ಭರಾಮಿತೆ

ಋಷಿ ಹೀಗೆ ಹೇಳುತ್ತಾನೆ, ಹೇ ಭಗವಂತ! ಅರ್ಪಿಸುವುದಕ್ಕಾಗಿ ನನ್ನ ಬಳಿ ಏನೂ ಇಲ್ಲ. ನನ್ನ ಬಳಿ ಹಸುಗಳೂ ಇಲ್ಲ. ಅಂದ ಮೇಲೆ, ನಾನು ಏನು ತಾನೆ ಅರ್ಪಿಸಲಿ? ಕೊಡಲಿಯಿಲ್ಲ ಎಂದ ಮೇಲೆ ಸೌದೆ ಎಲ್ಲಿಂದ ತರಲಿ? ಇಂಥ ಪರಿಸ್ಥಿತಿಯಲ್ಲಿ ನಾನೇನು ಅರ್ಪಿಸುತ್ತಿದ್ದೇನೋ ಅದರಿಂದಲೇ ಸಂತುಷ್ಟನಾಗು. ಈ ರೀತಿ ಐಚ್ಛಿಕ ದಾರಿದ್ರ್ಯ ಋಷಿಗಳ ಜೀವನದಲ್ಲಿತ್ತು. ಅವರು ಶರೀರ ಪರಿಶ್ರಮ ನಿಷ್ಠೆಯುಳ್ಳವರಾಗಿದ್ದರಿಂದ ಏನೆಲ್ಲಾ ಅಲ್ಪ-ಸ್ವಲ್ಪ ದೊರೆಯುತ್ತಿತ್ತೊ ಅದರಲ್ಲಿಯೇ ಸಂತುಷ್ಟರಾಗಿರುತ್ತಿದ್ದರು. ಮತ್ತು ತಮ್ಮ ಇಡೀ ಜಿವನವನ್ನು ಪರಮಾತ್ಮನಿಗೆ ಸಮರ್ಪಿಸುತ್ತಿದ್ದರು. ಇದೇ ವೈದಿಕ ಜೀವನ, ವೈದಿಕ ಧರ್ಮ.

ಕೃಣ್ವಂತೊ ವಿಶ್ವಮಾರ್ಯಂ

ಸಮಸ್ತ ವಿಶ್ವವನ್ನು ಆರ್ಯವನ್ನಾಗಿ ಮಾಡೋಣ. ಆದರೆ ನಾವು ಇದರ ಏಕಾಂಗಿ ಅರ್ಥಮಾಡಕೂಡದು ಮತ್ತು ವಿಶ್ವವನ್ನು ಆರ್ಯದೊಂದಿಗೆ ಮತ್ತು ಆರ್ಯವನ್ನು ವಿಶ್ವದೊಂದಿಗೆ ಜೋಡಿಸಿ ನಾವು ಪೂರ್ಣರಾಗೋಣ. ನಾವು ಅರ್ಧ, ಅಪೂರ್ಣ ಭಾಗ ಅಥವಾ ತುಣುಕಾಗದಿರೋಣ.

ಕಹೆ ನಾನಕ ಪುರಾ ಪಾಯ್ಲಾ, ಪುರೆ ಕೆ ಗುಣಗಾವ್. ಇದಕ್ಕೆ ಎರಡು ಅರ್ಥಗಳಿವೆ:– ಒಂದು ಅರ್ಥ, ವಿಶ್ವವನ್ನು ನಾವು ಆರ್ಯವನ್ನಾಗಿ ಮಾಡೋಣ. ಎರಡನೆಯ ಅರ್ಥ, ಆರ್ಯನನ್ನು ವಿಶ್ವನನ್ನಾಗಿ ಮಾಡೋಣ. ಆರ್ಯಮಯ ವಿಶ್ವ ಮತ್ತು ವಿಶ್ವಮಯ ಆರ್ಯ. ನಮ್ಮ ಸಂಸ್ಕೃತಿ ಮತ್ತು ಸಭ್ಯತೆಯನ್ನು ಇಡೀ ವಿಶ್ವದ ಪ್ರತಿನಿಧಿಯನ್ನಾಗಿ ಮಾಡೋಣ ಮತ್ತು ಜಗತ್ತಿನೆಲ್ಲ ಒಳ್ಳೆಯ ವಿಚಾರಗಳನ್ನು ನಾವು ನಮ್ಮ ಸಭ್ಯತೆಯಲ್ಲಿ ಸೇರಿಸಿಕೊಳ್ಳೋಣ ಹಾಗೂ ನಮ್ಮ ಸಭ್ಯತೆಯ ಒಳ್ಳೆಯ ವಿಚಾರಗಳನ್ನು ಜಗತ್ತಿಗೆ ಕೊಡೋಣ. ಭಾರತದ ಹೊರಗಿನ ವಿಚಾರವನ್ನು ಭಾರತದೊಳಕ್ಕೆ ತಂದು, ಭಾರತವನ್ನು ವಿಶ್ವಮಯ ಮಾಡೋಣ. ಇಲ್ಲಿಯ ಒಳ್ಳೆಯ ವಿಚಾರಗಳನ್ನು ವಿಶ್ವದಲ್ಲಿ ಹರಡಿ ವಿಶ್ವವನ್ನು ಭಾರತಮಯ ಮಾಡೋಣ. ಇದಕ್ಕೆ ಇನ್ನೊಂದು ಅರ್ಥದ ಮುಖವೂ ಇದೆ. ಏನೆಂದರೆ, ಹೊರಗಿನ ಕೆಟ್ಟ ವಿಚಾರಗಳು ಇಲ್ಲಿ ಬರದಂತೆ ತಡೆಯೋಣ ಮತ್ತು ಇಲ್ಲಿಯ ಕೆಟ್ಟ ವಿಚಾರಗಳು ಹೊರಗೆ ಹೋಗದಂತೆ ತಡೆಯೋಣ!

* * *

ವೃಣೀಮಹೆ ಸಖ್ಯಾಯಾ ವೃಣೀಮಹೆ ಯುಜಾಯಾ

ವೈಖಾನಸ ಋಷಿ ಹೀಗೆ ಹೇಳುತ್ತಾರೆ:– ಹೇ ಭಗವಂತ! ನಾನು ನಿನಗೆ ಶರಣು ಬಂದಿದ್ದೇನೆ. ಏಕೆಂದರೆ ನಾವು ಪರಸ್ಪರ ಸಖ್ಯರಾಗಿರೋಣ. ಹೊಂದಿಕೊಂಡಿರೋಣ, ಸಹಯೋಗದಿಂದಿರೋಣ.

* * *

ಅಪ್ತತ್ ನೂರ್ ತದಾಮೊ ಅಶ್ನುನುತೆ ಶತಾಸ್ ಇದ್ದ ಹಂತಸ್ತತ್ ಸಮಾಶತ

ಸೋಮರಸದ ಆನಂದ ಈಶ್ವರನ ರಸಭೋಗದ ಆನಂದಕ್ಕೆ ಸಮಾನ. ಸೋಮರಸವೆಂದರೆ ಪರಮೇಶ್ವರನ ರಸ. ಆದರೆ ಯಾರು ತಮ್ಮ ತನು(ದೇಹ)ವನ್ನು ತಪ್ತ ಮಾಡುತ್ತಾರೋ ಅವನಿಗೆ ಅದು ಪ್ರಾಪ್ತವಾಗುತ್ತದೆ. ಯಾರು ತನು ತಪ್ತ ಮಾಡುವುದಿಲ್ಲವೊ ಅವನಿಗೆ ಆ ಆನಂದ ದೊರೆಯುವುದಿಲ್ಲ. ಯಾರು ತಪಸ್ಸಿನಿಂದ ತನ್ನ ತನುವನ್ನು ತಾಪಗೊಳಿಸಿಲ್ಲವೊ ಅವನಿಗೆ ಪರಮ ರಮಣೀಯ ಖಾದ್ಯ ದೊರೆಯುವುದಿಲ್ಲ.

* * *

ಶೂರ ಗ್ರಾಮಃ ಸರ್ವ ವೀರಃ ಸಹಾವಾನ್

ವೀರರಾಗಿದ್ದೂ ಪರಸ್ಪರ ಸಹಿಸಿಕೊಂಡಿರುವಂಥ ಗ್ರಮಾವೇ ಶೂರ ಗ್ರಾಮ. ಯಾರು ವೀರರೋ ಅವರು ಸಹಿಸುತ್ತಾರೆ. ಹೀಗೆ ಎಲ್ಲರನ್ನೂ ಸಹಿಸಿಕೊಳ್ಳುವಂಥ 'ಶೂರಗ್ರಾಮ' ರಚಿಸೋಣ.

* * *

ಅನು ಜನಾನ್ ಯತತೆ ಪಂಚ ಧೀರಃ

ಹಳ್ಳಿಯಲ್ಲಿ ಯಾರು ಜ್ಞಾನಿ, ಬುದ್ಧಿಮಾನ್ ಪುರುಷರು ಇದ್ದರೂ ಅವರು

ಪಂಚರ ಅಭಿಪ್ರಾಯಕ್ಕನುಸಾರವಾಗಿ ಸೇವೆ ಮಾಡುವ ಪ್ರಯತ್ನ ಮಾಡುತ್ತಾರೆ. ತಮ್ಮ ಬುದ್ಧಿ ಉಪಯೋಗಿಸುವುದಿಲ್ಲ. ಧೀರರೆಂದರೆ ಬುದ್ಧಿವಂತರು, ಜ್ಞಾನಿ.

* * *

ಋಗ್ವೇದವು ಕವಿಯ ವ್ಯಾಖ್ಯೆಯನ್ನು ಬಹು ಸುಂದರವಾಗಿ ಮಾಡಿದೆ.

ಬ್ರಹ್ಮಾದೇವಾನಾಮ್ ಪದವೀಃ ಕವೀನಾಂ ಋಷಿರ್ ಪ್ರಾಣಮ್ ಮಹಿಷೊ ಮೃಗಾಣಾಂ
ಶ್ಯೇನೋ ಗೃಧ್ರಾಣಾಂ ಸ್ವಧಿತಿರ್ವನಾನಾಂ ಸೋಮಃ ಪವಿತ್ರ ಮತ್ಯೇತಿ ರೇಭನ್

ಪರಮಾತ್ಮ ಗರ್ಜನೆ ಮಾಡುತ್ತ ಹೃದಯದಿಂದ ಪ್ರಕಟವಾಗುತ್ತಾನೆ. ದೇವತೆಗಳಲ್ಲಿ ಸೋಮ ಬ್ರಹ್ಮದೇವ, ಕವಿಗಳಲ್ಲಿ ಪದಜ್ಞ ವಿಪ್ರರಲ್ಲಿ ಋಷಿ, ಮೃಗಗಳಲ್ಲಿ ಸಿಂಹ, ಗೃದ್ರಗಳಲ್ಲಿ ಶ್ಯೇನಾ ಮತ್ತು ಕಾಡಿನಲ್ಲಿ ಕೊಡಲಿ. ಗೀತೆಯ ವಿಭೂತಿಯೋಗದ ಮೂಲ ಈ ಮಂತ್ರದಲ್ಲಿದೆ. ಸೋಮ ಅಂದರೆ ಪರಮಾತ್ಮ. ಈ ಮುಖ್ಯ ಅರ್ಥವಂತೂ ಇಲ್ಲಿ ಇದ್ದೇ ಇದೆ. ಜೊತೆಜೊತೆಯಲ್ಲಿ, ಸೋಮರಸ 'ಪವಿತ್ರ'ದಿಂದ ಪ್ರಕಟವಾಗುತ್ತದೆ ಎಂಬ ಅರ್ಥ ಕೂಡ ಇದೆ. ಚಂದ್ರ 'ಪವಿತ್ರ' (ಆಕಾಶ)ದಲ್ಲಿ ಪ್ರಕಟವಾಗುತ್ತಾನೆ. ಸೋಮರಸವನ್ನು ಜರಡಿಯಲ್ಲಿ ಜಾಲಾಡಿಸಲಾಗುತ್ತದೆ. ಚಂದ್ರ ಕಿರಣಗಳು ಕೂಡ ಆಕಾಶವೆಂಬ ಫಿಲ್ಟರ್‌ನಿಂದ ಹೊರಬಂದು ನಮಗೆ ದೊರೆಯುತ್ತವಲ್ಲವೆ?

ದೇವತೆಗಳಲ್ಲಿ ಶ್ರೇಷ್ಠ ಬ್ರಹ್ಮ. ಅವನಿಗೆ ಧರ್ಮದ ಸಾಕ್ಷಾತ್ಕಾರವಾಗಿದೆ. ಇಂಥ ದ್ರಷ್ಟಾ ಶ್ರೇಷ್ಠ ಮತ್ತು ಕವಿಗಳಲ್ಲಿ ಯಾರು ಪದ ತಲುಪಿದ್ದಾರೊ ಅವರು ಕವಿಗಳಲ್ಲಿ ಶ್ರೇಷ್ಠ. ಇಂಥ ಪದ ಪ್ರಾಪ್ತ ಪುರುಷನಿಗೆ 'ಪದವಿ' ಶಬ್ದ ಅನ್ವಯಿಸುತ್ತದೆ. ಅಂಥವರು ಪದವಿತ್ ಅಥವಾ ಪದಜ್ಞ ಎಂದು ಕರೆಯಲ್ಪಡುತ್ತಾರೆ. ಯಾರು ಪದವಿವರೆಗೆ ತಲುಪಿದ್ದಾರೊ ಅವರು ಮೇಲೆ ತಲುಪಿ ನಾಲ್ಕು ಕಡೆಗೂ ದೃಷ್ಟಿ ಹಾಯಿಸುತ್ತಾರೆ. ಅವರಿಗೆ ಸಮಗ್ರ ದರ್ಶನವಾಗುತ್ತದೆ. ಮೇಲೆ ಹತ್ತಿ ನೋಡುವುದರಿಂದ ವ್ಯಾಪಕ ದರ್ಶನವಾಗುತ್ತದೆ. ಯಾರು ವಿಚಾರಗಳಿಂದ ಮೇಲಕ್ಕೆ ಎದ್ದೇಳುತ್ತಾರೋ, ಯಾರು ಉದಾಸೀನ, 'ಉತ್-ಆಸೀನ್' (ಸಾಕ್ಷಿರೂಪ) ಆಗುತ್ತಾರೋ ಅವರು ಉತ್ತಮ ಹಾಗೂ ಸಮ್ಯಕ್ ದರ್ಶನ ಮಾಡಬಲ್ಲವರಾಗುತ್ತಾರೆ. ಕವಿ ಅಂದರೆ ಕ್ರಾಂತದರ್ಶಿ ಎಂಬುದಾಗಿ ನಿರುಕ್ತ ಹೇಳುತ್ತದೆ. ಕ್ರಾಂತದರ್ಶಿ ಅಂದರೆ ಪಾರದರ್ಶಿ ದೇಹದ ಪರದೆಯನ್ನು ತೆಗೆದು ಹಾಕಿ ಆ ಕಡೆಗೆ ಇರುವುದನ್ನು ನೋಡ ಬಲ್ಲವನಾಗುತ್ತಾನೆ.

ಕವೀಃ ಕ್ರಾಂತದರ್ಶಿ ಎಂಬುದಕ್ಕೆ ಕವಿ ಬಹುವಾಗಿ ಅಸ್ಪಷ್ಟವಾಗಿಯೂ ನೋಡುತ್ತಾನೆ ಎಂಬ ಇನ್ನೊಂದು ಅರ್ಥ ಕೂಡ ಇದೆ. ಯಾವ ವಸ್ತು ಸ್ಪಷ್ಟವಾಗಿದೆಯೋ ಅದನ್ನು ಪ್ರತಿಯೊಬ್ಬರೂ ನೋಡುತ್ತಾರೆ, ಪಶುಕೂಡ ನೋಡುತ್ತದೆ. ಪಶು ಶಬ್ದದ ಅರ್ಥವೇ 'ಪಶ್ಯತಿ ಇತಿ ಪಶುಃ'. ಯಾವುದಕ್ಕೆ ನೋಡದೇ ಭರವಸೆ ಉಂಟಾಗುವುದಿಲ್ಲವೋ ಅದು ಪಶು. ಅದು ಚಿಂತನದಿಂದ ಯಾವ ಮಾತನ್ನೂ ಒಪ್ಪುವುದಿಲ್ಲ. ಸಾಕ್ಷಿ ತೋರಿಸು ಎಂದು ಹೇಳುತ್ತದೆ. ಕವಿಯ ಚಿಂತನೆ ಯಾವಾಗಲೂ ಅಸ್ಪಷ್ಟವಾಗಿರುತ್ತದೆ. ತನ್ನ ಕಾವ್ಯದ ಆಳವನ್ನು ಅವನು ಸ್ವತಃ ತಿಳಿದಿರುವುದಿಲ್ಲ. ಕವಿಗೆ ಹೊಳೆಯುವಂತದ್ದು ಅವನ ಸ್ಪಷ್ಟ ಚಿಂತನೆಯ ಯಾವ ವಿಷಯವೂ ಅವನಿಗೆ ಪ್ರಾಪ್ತವಾಗುವುದಲ್ಲ ಅವನು ಏನನ್ನೂ ರಚಿಸುವುದಿಲ್ಲ. ಸಹಜವಾಗಿಯೇ ಅವನಿಗೆ ಆ ವಿಷಯ ದೊರೆಯುತ್ತದೆ.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಕರುಣಾಗೃಹದ ಹಳೆಯ ಅಂಗವಿಕಲ ನಿವಾಸಿ ಭಾಗೀರಥಿ. ಈಗ ಅವಳಿಗೆ ಸುಮಾರು ಐವತ್ತು ವರ್ಷ. ಅವಳ ವಿಷಯದಲ್ಲಿ ಅನೇಕ ದುರ್ದೈವದ ಸಂಗತಿಗಳಿವೆ. ಮೊದಲನೆಯದಾಗಿ ಅವಳು ವಿಕಲ ಚೇತನಳು, ವಿಚಿತ್ರ ವಿಕಲ ಚೇತನ. ಬಲಗೈಯನ್ನು ಸದಾ ಮೇಲ್ಕಕೆ ಎತ್ತಿ ಹಿಡಿದುಕೊಂಡು ಎಡಗೈ ಕಂಕುಳಲ್ಲಿ ಊರುಗೋಲು ಇಟ್ಟುಕೊಂಡು ನಡೆಯಬೇಕು. ಎಡಗಾಲಿನ ಹಿಮ್ಮಡಿ ತಿರುಚಿಕೊಂಡಿದೆ. ಬಾಯಿಯಿಂದ ಮಾತುಗಳು ಸ್ಪಷ್ಟವಾಗಿ ಬರುವುದಿಲ್ಲ. ಓದು ಬರಹ ಇತ್ಯಾದಿಗಳಲ್ಲಿ ತುಂಬಾ ಹಿಂದುಳಿಯುವ ಸ್ವಭಾವ. ಸ್ವಲ್ಪ ಮುಂಗೋಪ ಕೂಡ. ಆದ್ದರಿಂದ ಭಾಗೀರಥಿ ತನ್ನ ಹೆಚ್ಚಿನ ಸಮಯವನ್ನು ಕುಳಿತುಕೊಂಡೇ ಕಳೆಯಬೇಕಾಯಿತು. ಕೆಲವಾರು ವರ್ಷ ಅಂಬರ್ ಚರಕಾದ ಮೇಲೆ ನೂಲು ತೆಗೆದು ಹಣ ಸಂಪಾದಿಸುತ್ತಿದ್ದಳು. ಅವಳಿಗೆ ಸರ್ಕಾರದಿಂದ ಅಂಗವಿಕಲರ ನಿರ್ವಾಹ ವೇತನ ದೊರೆಯುತ್ತಿತ್ತು. ಇತ್ತೀಚೆಗೆ ಭಾಗೀರಥಿಯ ಆರೋಗ್ಯದಲ್ಲಿ ಬಹಳಷ್ಟು ಏರುಪೇರಾಯಿತು. ಕರುಣಾಗೃಹದ ಈಗಿನ ಪರಿಸ್ಥಿತಿಯಲ್ಲಿ ಅನಾರೋಗ್ಯಕ್ಕೆ ಒಳಗಾದ ಭಾಗೀರಥಿಯನ್ನು ಇಟ್ಟುಕೊಳ್ಳುವುದು ಕಷ್ಟವೆನಿಸಿತು. ಪ್ರಾರಂಭಿಕ ಮತ್ತು ಪ್ರಾಥಮಿಕ ಔಷಧೋಪಚಾರ ಮಾಡಿಸಲಾಯಿತು. ಅವಳ ಆರೋಗ್ಯದಲ್ಲಿ ಸುಧಾರಣೆ ಕಂಡು ಬರಲಿಲ್ಲ. ಆದ್ದರಿಂದ ಅನಿವಾರ್ಯವಾಗಿ ಅವಳನ್ನು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕಾಸರಕೋಡ್‌ನಲ್ಲಿರುವ ವೃದ್ಧಾಶ್ರಮಕ್ಕೆ ಸೇರಿಸಲಾಗಿದೆ. ಆ ವೃದ್ಧಾಶ್ರಮದ ಮುಖ್ಯಸ್ಥರು ತುಂಬ ದೊಡ್ಡ ಮನಸ್ಸು ಮಾಡಿ ಭಾಗೀರಥಿಯನ್ನು ಸೇರಿಸಿಕೊಂಡರು. ಆ ಸಂಸ್ಥೆಯವರಿಗೆ ಜನಪದ ಸೇವಾ ಟ್ರಸ್ಟ್ ತುಂಬಾ ಆಭಾರಿಯಾಗಿದೆ. ಜೊತೆಗೆ ಸುಮಾರು ಎಂಟು ವರ್ಷದ ಬಾಲಕಿಯಾಗಿದ್ದಾಗಿನಿಂದ ಕರುಣಾಗೃಹದ ನಿವಾಸಿಯಾಗಿದ್ದ ಭಾಗೀರಥಿಯ ಸೇವೆಯನ್ನು ಮುಂದುವರಿಸಿಕೊಂಡು ಹೋಗಲು ಟ್ರಸ್ಟ್‌ಗೆ ಸಾಧ್ಯವಾಗದೆ ಇದ್ದುದ್ದಕ್ಕೆ ವಿಷಾದವೂ ಇದೆ. ಭಾಗೀರಥಿಯದು ಒಂದು ವಿಶೇಷವಾದ ಪರಿಸ್ಥಿತಿ ಮತ್ತು ಪ್ರಸಂಗ.

ಕರುಣಾಗೃಹದ ಹೊಸ ವಿಭಾಗವಾಗಿರುವ ದತ್ತು ಸ್ವೀಕಾರ ಕೇಂದ್ರಕ್ಕೆ ಇತ್ತೀಚೆಗೆ ಒಂದು ದಿನದ ಹೆಣ್ಣು ಮಗು ಪ್ರವೇಶ ಪಡೆಯಿತು. ಈ ಟ್ರಸ್ಟ್ ಸಮಾಚಾರ ಪ್ರಕಟಗೊಳ್ಳುವ ವೇಳೆಗೆ ಆ ಮಗುವಿಗೆ ಸುಮಾರು ಒಂದು ತಿಂಗಳು ವಯಸ್ಸಾಗಿರುತ್ತದೆ. ಮಗು ಆರೋಗ್ಯವಾಗಿದೆ.

ಜನಪದ ಸೇವಾ ಟ್ರಸ್ಟ್‌ಗೆ ಇಪ್ಪತ್ತೆರೆಡು ವರ್ಷಗಳ ಹಿಂದೆ ಸ್ವಯಂ ಸೇವಕನಾಗಿ ಬಂದಿದ್ದ ಇಂಗ್ಲೆಂಡಿನ ಜೇಮಿ ಡ್ರಮಂಡ್ ಇತ್ತೀಚೆಗೆ ಟ್ರಸ್ಟಿಗೆ ಭೇಟಿನೀಡಿದರು. ಅನೇಕ ವರ್ಷಗಳ ನಂತರ ಅವರು ಬಂದದ್ದು ಬಹಳ ಸಂತೋಷವಾಯಿತು. ಜೇಮಿಗೂ ಟ್ರಸ್ಟ್‌ನ ಇತ್ತೀಚಿನ ಎಲ್ಲ ಬೆಳವಣಿಗೆ ನೋಡಿ ಆನಂದವಾಯಿತು.

೨೦೧೧ ಸೆಪ್ಟಂಬರ್ ಮಾಹೆಯ ದಾನಿಗಳು


ಶ್ರೀ ಸಿ.ಎಸ್.ಬನಶಂಕರಯ್ಯ, ಶ್ರೀ ಸಿ.ಡಿ.ಕಾರಿಯಪ್ಪ, ಶ್ರೀ ಆರ್.ಆರ್.ಆನವಟ್ಟಿ, ಶ್ರೀ ಪ್ರಶಾಂತ್, ಶ್ರೀ ಎಂ.ವಿ.ದೇಶಪಾಂಡೆ, ಶ್ರೀ ಕಿಶೋರ್ ಕಾಮತ್ – ಬೆಂಗಳೂರು

ಶ್ರೀಮತಿ ಲಲಿತಾರಾಜ್, ಶ್ರೀಮತಿ ಕ್ಷಮಾ ಕತ್ವಾರ್ – ಮೈಸೂರು

ಶ್ರೀ ಸಿ.ವಿ.ನಂಜುಂಡಸ್ವಾಮಿ, ಶ್ರೀ ಎಂ.ಎಸ್.ವೆಂಕಟೇಶ್ – ಮಂಡ್ಯ ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೯೫

– ಸುರೇಂದ್ರ ಕೌಲಗಿ



ವಿನೋಬಾ ಜಯಂತಿ ಪ್ರಯುಕ್ತ ಇತ್ತೀಚೆಗೆ ಹೊಸಪೇಟೆಗೆ ಹೋದಾಗ ಅನಿರೀಕ್ಷಿತವಾದ ಆದರೆ ಸಂತೋಷದಾಯಕವಾದ ಘಟನೆ ಸಂಭವಿಸಿತು. ಅದರಿಂದಾಗಿ ಟ್ರಸ್ಟಿಗೆ ಸಂಬಂಧಿಸಿದ ಕೆಲ ಮಧುರ ಸ್ಮರಣೆಗಳು ಮನಸ್ಸಿಗೆ ಬಂದವು. ಈಗಾಗಲೇ ನಮ್ಮ ವಾಚಕ ಮಿತ್ರರಿಗೆ ತಿಳಿದಿರುವಂತೆ ಜನಪದ ಸೇವಾ ಟ್ರಸ್ಟ್‌ನ ಪ್ರಮುಖ ಕಾರ್ಯಕ್ರಮವಾಗಿದ್ದ ಕರುಣಾಗೃಹದ ಅಂಗವಿಕಲ ಮಕ್ಕಳು ದೊಡ್ಡವರಾಗಿ ಚದುರಿ ಹೋದರು; ಬಲಿತ ರೆಕ್ಕೆಯ ಹಕ್ಕಿಗಳಂತೆ. ಆದ್ದರಿಂದ ಅಕಸ್ಮಾತ್ತಾಗಿ ಆ ಹಳೆ ಅಂಗವಿಕಲ ವಿದ್ಯಾರ್ಥಿಗಳ ಭೇಟಿಯಾದಾಗ ಕರುಣಾಗೃಹದ ಚಟುವಟಿಕೆಗಳು ನೆನಪಿಗೆ ಬರುತ್ತವೆ. ಕೆಲವೊಂದು ಸಲ ಆ ಹಳೆ ವಿದ್ಯಾರ್ಥಿಗಳು ತಾವೆ ಜನಪದ ಸೇವಾ ಟ್ರಸ್ಟ್‌ನ್ನು ನೆನೆದು ಟ್ರಸ್ಟಿನಲ್ಲಿಯ ಜನರನ್ನು ಭೇಟಿಮಾಡಲು ಬರುತ್ತಾರೆ. ಅದು ಕೂಡ ಒಂದು ವಿಶೇಷ ಸಂಗತಿಯಾಗಿಯೇ ಪರಿಣಮಿಸುತ್ತದೆ. ಹೊಸಪೇಟೆಗೆ ಹೋದಾಗ ಕರುಣಾಗೃಹದ ಹಳೆ ವಿದ್ಯಾರ್ಥಿಯೊಬ್ಬ ನಾನು ಅಲ್ಲಿಗೆ ಬಂದಿರುವುದನ್ನು ತಿಳಿದು ನಾನಿರುವ ಕಡೆ ಭೇಟಿಮಾಡಲು ಬಂದ. ಅವನ ಒಂದು ಕಾಲಿನಲ್ಲಿ ತೊಂದರೆ ಇದೆ. ಕುಂಟುತ್ತಾ ನಡೆಯುತ್ತಾನೆ. ಆದರೆ ಆ ದೈಹಿಕ ತೊಂದರೆಯನ್ನು ಮರೆತು ತುಂಬಾ ಆತ್ಮವಿಶ್ವಾಸದಿಂದ ಒಂದು ಗ್ರಾಮಪಂಚಾಯಿತಿಯಲ್ಲಿ ಉತ್ಸಾಹದಿಂದ ಕೆಲಸಮಾಡಿಕೊಂಡಿದ್ದಾನೆ. ಅವನ ಹೆಸರು ಹನುಮಂತ. ಅವನು ಕರುಣಾಗೃಹಕ್ಕೆ ಬಂದಾಗ ಸುಮಾರು ಎಂಟುವರ್ಷದವನಾಗಿದ್ದಿರಬಹುದು. ಈಗ ಅವನಿಗೆ ಸುಮಾರು ಮೂವತ್ತು ವರ್ಷ. ಮದುವೆಯಾಗಿ ಒಂದು ಗಂಡು ಮಗು ಕೂಡ ಇದೆ. ಮಗು ಹುಟ್ಟಿ ಒಂದು ವರ್ಷವಾದರೂ ಸರಿಯಾಗಿ ಕುಳಿತುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಹನುಮಂತನಿಗೆ ಗಾಬರಿಯಾಯಿತು. ತನ್ನಂತೆಯೇ ಎಲ್ಲಿ ಮಗು ಕೂಡ ಶಾರೀರಿಕ ತೊಂದರೆಗೆ ಒಳಪಡುವುದೂ ಎಂಬ ಭೀತಿಯಾಯಿತು. ವೈದ್ಯರಿಗೆ ತೋರಿಸಿದ. ಯಾವುದೇ ಪ್ರಕಾರದ ಅಂಗವಿಕಲತೆ ಇಲ್ಲ. ಕಾಲಕ್ರಮೇಣ ಮಗುವಿಗೆ ಶಕ್ತಿಬಂದು ಅದು ಕುಳಿತು ಕೊಳ್ಳುವಂತೆ ಆಗುತ್ತದೆ, ಅಂಬೆಗಾಲಿಡುವಂತೆ ಆಗುತ್ತದೆ ಎಂದು ಹೇಳಿದರು. ಆಗ ಹನುಮಂತನಿಗೆ ಸಮಾಧಾನವಾಯಿತು. ಹನುಮಂತ ಕರುಣಾಗೃಹಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಬಂದ ಹುಡುಗನಾಗಿದ್ದ. ಅಂದರೆ ಬಾಲಾಪರಾಧಿ ಬಾಲಕನಾಗಿ ಸುಧಾರಣೆ ಹೊಂದುವ ದೃಷ್ಟಿಯಿಂದ ಕರುಣಾಗೃಹಕ್ಕೆ ಕಳುಹಿಸಲ್ಪಟ್ಟಿದ್ದ. ಅವನು ಕರುಣಾಗೃಹಕ್ಕೆ ಬಂದ ಮೇಲೆ ಅಲ್ಲಿಯ ಒಳ್ಳೆಯ ವಾತಾವರಣದ ಕಾರಣ

ಒಳ್ಳೆಯ ನಡೆನುಡಿ ಬೆಳೆಸಿಕೊಂಡ. ಓದುವುದರಲ್ಲಿ ಆಸಕ್ತಿ ವಹಿಸಿದ. ಅವನ ಹೇಳಿಕೆಯ ಪ್ರಕಾರ ಮೇಲುಕೋಟೆಯಲ್ಲಿ ಪಡೆದ ಶಿಕ್ಷಣವೇ ಈಗ ಅವನನ್ನು ಕಾಪಾಡುತ್ತಿದೆ. ಹನುಮಂತನ ಕಂಠ ಚೆನ್ನಾಗಿದೆ. ಆದ್ದರಿಂದ ಭಾವಗೀತೆಗಳನ್ನು ಹೇಳುವಂತೆ ಅವನಿಗೆ ಪ್ರೋತ್ಸಾಹಿಸಲಾಯಿತು. ಅನೇಕ ಹಾಡುಗಳನ್ನು ಕಲಿತ. ಹನುಮಂತನು ಈಗ ಬಳ್ಳಾರಿ ಜಿಲ್ಲೆಯಲ್ಲಿ ಕಲಾಕಾರರ ಒಂದು ತಂಡ ಕಟ್ಟಿಕೊಂಡು ಸರ್ಕಾರ ಪೋಷಿತ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದಾನೆ. ತನ್ಮೂಲಕ ಒಳ್ಳೆಯ ಆದಾಯ ಪಡೆಯುತ್ತಿದ್ದಾನೆ. ನಮ್ಮನ್ನು ಭೇಟಿಮಾಡಲು ಬಂದಾಗ ನನ್ನೊಂದಿಗೆ ಕಾಸರಗೋಡಿನ ನಾಮದೇವ ಶೆಣ್ಯೆ ಎಂಬ ಹಿರಿಯ ಸರ್ವೋದಯ ಕಾರ್ಯಕರ್ತರಿದ್ದರು. ಅವರು ಸರ್ವೋದಯ ಗೀತೆಗಳನ್ನು ತುಂಬ ಪರಿಣಾಮಕಾರಿಯಾಗಿ ಹೇಳುತ್ತಾರೆ. ಅವರಿಗೆ ಹನುಮಂತನಲ್ಲಿರುವ ಹಾಡಿನ ಆಸಕ್ತಿ ತಿಳಿಸಲಾಯಿತು. ಆಗ ಅವರು ಹನುಮಂತನಿಂದ ಕೆಲ ಹಾಡುಗಳನ್ನು ಹಾಡಿಸಿದರು. ಅವರಿಗೆ ಸಂತೋಷವಾಯಿತು. ಸರ್ವೋದಯದ ಗೀತೆಗಳನ್ನು ಹಾಡಬೇಕೆಂದು ತಿಳಿಸಿ ಕೆಲವು ಹಾಡುಗಳನ್ನು ಅವನ ಮುಂದೆ ಹಾಡಿ ಅವುಗಳ ರಾಗ ಸಂಯೋಜನೆಯನ್ನು ತೋರಿಸಿಕೊಟ್ಟರು. ಅದನ್ನು ಹನುಮಂತ ಕೂಡಲೆ ಗ್ರಹಿಸಿದ ಮತ್ತು ಮರುಕ್ಷಣದಲ್ಲಿಯೇ ಹಾಡಿ ತೋರಿಸಿದ. ಶೈಣ್ಯೆರವರಿಗೂ ಖುಷಿಯಾಯಿತು. ಹನುಮಂತನಿಗೂ ಖುಷಿಯಾಯಿತು. ಹೀಗೆ ಕರುಣಾಗೃಹದ ಸಂಬಂಧ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಹಳೆ ವಿದ್ಯಾರ್ಥಿಗಳೊಂದಿಗೆ ಬೆಳೆಯುತ್ತಲೇ ಇರುತ್ತದೆ. ಇದೊಂದು ಅವ್ಯಕ್ತ ಪ್ರಗತಿಯ ಚಕ್ರ.

* * *

ಸನ್ಮಾನ್ಯರಿಂದ...

"ಕಾಲ ಕೆಟ್ಟು ಹೋಯಿತು" ಎಂಬ ಉಕ್ತಿ ಮಹಾಭಾರತದಲ್ಲೇ ಬರುತ್ತದೆ. (ಆಶ್ಚರ್ಯ) ಆದರೆ ಕಾಲ ಪೂರ್ತಿ ಕೆಟ್ಟಿಲ್ಲ. ಈಗಲೂ ಅಣ್ಣಾ ಹಜಾರೆಯವರಂಥವರು ಇದ್ದಾರೆ. (ಕೆಟ್ಟ ಪ್ರಚೋದಕ ಪತ್ರಿಕೆಗಳ ನಡುವೆ) ಜನಪದ ವಿಚಾರದಂಥ ಪತ್ರಿಕೆಗಳೂ ಇವೆ!

- ಸಿ.ಪಿ.ಕೆ, ಮೈಸೂರು

ಸರ್ವೋದಯ ಆಂದೋಲನದ ಮುನ್ನಡೆ

ಕರ್ನಾಟಕದಲ್ಲಿ ಸರ್ವೋದಯ ಆಂದೋಲನವನ್ನು ವಿಸ್ತರಿಸುವ ದೃಷ್ಟಿಯಿಂದ ಮತ್ತು ಹೆಚ್ಚು ಹೆಚ್ಚು ಜನರು ಸರ್ವೋದಯ ವಿಚಾರವನ್ನು ತಿಳಿಯುವ ದೃಷ್ಟಿಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಆಯಾ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿ ರಚಿಸಲಾಗುತ್ತಿದೆ ಎಂಬ ವಿಚಾರವನ್ನು ಈಗಾಗಲೇ ತಿಳಿಸಲಾಗಿದೆ. ಈ ವಿಚಾರಕ್ಕನುಗುಣವಾಗಿ ರಾಮನಗರ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿ ರಚಿಸಲಾಗಿದೆ. ಈ ಮಿತ್ರ ಮಂಡಲಿಯು ಸದಸ್ಯರನ್ನು ಮಾಡಿಕೊಳ್ಳುವ ಅಭಿಯಾನವನ್ನು ಆರಂಭಿಸಿದೆ. ಈ ಜಿಲ್ಲಾ ಸರ್ವೋದಯ ಮಂಡಲಿಯ ಅಧ್ಯಕ್ಷರಾಗಿ ಶ್ರೀ ಎನ್.ವಿ.ಲೋಕೇಶ್‌ರವರನ್ನು ಆಯ್ಕೆ ಮಾಡಲಾಗಿದೆ. ಇವರು ಇಷ್ಟರಲ್ಲಿಯೆ ಮಿತ್ರಮಂಡಲಿಯ ಪದಾಧಿಕಾರಿಗಳನ್ನು ಗೊತ್ತುಮಾಡುವರು.

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಮಿತ್ರಮಂಡಲಿ ರಚಿಸಲಾಯಿತು. ಈ ಮಿತ್ರಮಂಡಲಿಯ ಅಧ್ಯಕ್ಷರಾಗಿ ಶ್ರೀ ಮಹದೇವಪ್ಪ, ಸಂಚಾಲಕರಾಗಿ ನಾಗಶೆಟ್ಟಿಯವರು ಆಯ್ಕೆಯಾಗಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಸರ್ವೋದಯ ಮಿತ್ರಮಂಡಲಿ ರಚಿಸುವ ಅಂಗವಾಗಿ ಔಪಚಾರಿಕ ಸಭೆಯನ್ನು ಹೊಸಪೇಟೆಯಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ ಜೆ.ಸೀತಾರಾಮ ಆಚಾರ್ಯ, ಕೆ.ಸತ್ಯನಾರಾಯಣರಾವ್, ಟಿ.ಜಿ.ವಿಠಲ್, ಕೆ.ವಿ.ಪತ್ತಾರ್,ಯು.ರಾಘವೇಂದ್ರರಾವ್, ಹನುಮಯ್ಯ ತಿಮ್ಮಲಾಪುರ, ನಾರಾಯಣ ಭಟ್ ಹಾಜರಿದ್ದರು.

ಡಿಸೆಂಬರ್ ಕೊನೆಯವಾರದಲ್ಲಿ ಮಧುರೈನಲ್ಲಿ ನಡೆಯಲಿರುವ ಅಖಿಲ ಭಾರತ ೪೨ನೇ ಸರ್ವೋದಯ ಸಮಾಜ ಸಮ್ಮೇಳನದ ಸಿದ್ಧತೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯದ ಪರವಾಗಿ ಮಂಗಳೂರು ಜಿಲ್ಲಾ ಸರ್ವೋದಯ ಮಿತ್ರಮಂಡಲಿಯ ಅಧ್ಯಕ್ಷರಾದ ಶ್ರೀ ನಾಮದೇವ ಶೆಣೈ ಮತ್ತು ಸಂಚಾಲಕರಾದ ಯಶವಂತ್‌ರವರು ಭಾಗವಹಿಸಿದ್ದರು.

ಅಖಿಲ ಭಾರತ ಸರ್ವೋದಯ ಮಂಡಲ ಅಂದರೆ ಸರ್ವ ಸೇವಾ ಸಂಘದ ಸಂಘಟನಾತ್ಮಕ ವಿಷಯಗಳ ಬಗ್ಗೆ ಚರ್ಚಿಸುವುದಕ್ಕಾಗಿ ಸೇವಾ ಗ್ರಾಮದಲ್ಲಿ ಅಕ್ಟೋಬರ್ ೧೪-೧೫ ಈ ದಿನಾಂಕಗಳಲ್ಲಿ ಸಂಗೋಷ್ಠಿ ನಡೆಯಲಿದೆ ಎಂದು ಕಾರ್ಯದರ್ಶಿ ಚಂದನ್‌ಪಾಲ್ ತಿಳಿಸಿದ್ದಾರೆ.

ಮಂಡ್ಯ ಜಿಲ್ಲೆ ಕಾಳಮುದ್ದನದೊಡ್ಡಿಯಲ್ಲಿರುವ ಭಾರತಿ ಶಿಕ್ಷಣ ಸಂಸ್ಥೆಯವರು ತಮ್ಮ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಆಶ್ರಯದಲ್ಲಿ 'ಭ್ರಷ್ಟಾಚಾರ ಮುಕ್ತ ಸಮಾಜ ರಚನೆ: ಒಂದು ಸವಾಲು' ಎಂಬ ವಿಷಯವಾಗಿ ಏರ್ಪಡಿಸಿದ್ದ ರಾಜ್ಯ ಮಟ್ಟದ ಒಂದು ದಿನದ ವಿಚಾರಗೋಷ್ಠಿಯನ್ನು ಕರ್ನಾಟಕ ರಾಜ್ಯ ಸರ್ವೋದಯ ಮಂಡಲಿ ಅಧ್ಯಕ್ಷರು ಉದ್ಘಾಟಿಸಿದರು.

ಕರ್ನಾಟಕ ರಾಜ್ಯ ಗಾಂಧೀ ಸ್ಮಾರಕ ನಿಧಿಯ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ರಾಜ್ಯ ಸರ್ವೋದಯ ಮಂಡಲಿ ಕಾರ್ಯದರ್ಶಿ ಶ್ರೀ ಎಲ್.ನರಸಿಂಹಯ್ಯ, ಮಂಡಲಿಯ ಯುವ ವಿಭಾಗದ ಸಂಚಾಲಕರಾದ ಡಾ॥ ಎಚ್.ಎಸ್.ಸುರೇಶ್ ಮತ್ತು ನಿಧಿಯ ಸಹ ಕಾರ್ಯದರ್ಶಿ ಶ್ರೀ ಕೋದಂಡ ರಾಮಯ್ಯನವರು ಮಂಗಳೂರಿನಲ್ಲಿಯ ಕೆಲ ಕಾಲೇಜುಗಳಿಗೆ ಭೇಟಿ ಕೊಟ್ಟು ಗಾಂಧೀ ವಿಚಾರದ ಪ್ರಸ್ತುತತೆಯನ್ನು ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.

ಖಾದಿ ವಿಚಾರ

ಚರಕಾ ಹಿಂದೂಸ್ಥಾನದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುವ ಗಾಂಧೀ ಸೇನೆಯ ಆಯುಧವಾಗಿತ್ತು. ಇದೆಂಥ ಆಯುಧವೆಂದರೆ ಯಾರನ್ನೇ ಆಗಲಿ ಕೊಲ್ಲುವುದಕ್ಕೆ ಇರದೆ ತನ್ನ ಅಸ್ತಿತ್ವದ ರಕ್ಷಣೆಗಾಗಿ ಸಿದ್ಧವಾಗಿರುತ್ತದೆ. ಶತ್ರುವನ್ನು ಕೊಲ್ಲುವುದರ ಬದಲಾಗಿ ಅವನ ಹೃದಯ ಪರಿವರ್ತನೆಗಾಗಿದೆ. ಆತ್ಮದಂಡ ಸಂಚಾಲಿತವಾಗಿ ಮತ್ತು ಸ್ವ ದ ಗುಂಡಿನಿಂದ ನಡೆಸುವಂಥ ಮೊಟ್ಟ ಮೊದಲನೆಯ ಅಪ್ರತಿಮ ಆಯುಧವಾಗಿದೆ. ಚರಕಾದಿಂದ ತಯಾರಾಗುವ ದಾರದ ಲಡಿಗಳು ಗುಂಡುಗಳಾಗಿವೆ. ಅವುಗಳಿಂದ ಹಿಂದೂಸ್ಥಾನದ ಸ್ವರಾಜ್ಯವನ್ನು ಪಡೆಯಲಾಯಿತು. ಚರಕಾ ಅಹಿಂಸೆಯ ಅಸ್ತ್ರ.

"ಚರಕಾ ನಡೆಸುತ್ತಾ ನಡೆಸುತ್ತಾ ಸ್ವರಾಜ್ಯ ಪಡೆಯುತ್ತೇವೆ." ಎಂಬ ಗೀತೆಯನ್ನು ಸ್ವಾತಂತ್ರ್ಯದ ದಿನಗಳಲ್ಲಿ ಮನೆ ಮನೆಗಳಲ್ಲಿ ಹಾಡಲಾಗುತ್ತಿತ್ತು. ಎಲ್ಲಿಯೇ ಚರಕಾ ನಡೆಯಲಿ ಅಲ್ಲಿ ಈ ಗೀತೆ ಕೇಳಿಬರುತ್ತಿತ್ತು. ಚರಕಾದಿಂದ ಸ್ವರಾಜ್ಯ ಪ್ರಾಪ್ತವಾಗುತ್ತದೆ ಎಂಬ ಕಲ್ಪನೆ ಆ ಕಾಲದಲ್ಲಿ ಮತ್ತು ಈ ಕಾಲದಲ್ಲಿ ಕೂಡ ಯಾವುದೇ ಭಾರತೀಯನಿಗೆ ಆಶ್ಚರ್ಯಜನಕವಾಗಿದೆ. ಆದರೆ ಗಾಂಧೀಜಿಯವರಿಗಲ್ಲ. ಹಿಂದೂಸ್ಥಾನದ ಭೂಮಿಯ ಮೇಲೆ ಕಾಲಿರಿಸಿದ ನಂತರ ತಮ್ಮ ಕೊನೆಯ ಸಮಯದವರೆಗೆ ಚರಕಾ ನಡೆಸಿ, ಸ್ವರಾಜ್ಯ ಪಡೆಯಿರಿ ಎಂದು ಹೇಳುವ ಏಕಮಾತ್ರ ವ್ಯಕ್ತಿ ಗಾಂಧೀಜಿಯವರಾಗಿದ್ದರು. ಈ ಮಾತನ್ನು ನಾವು ಕೂಡ ತಿಳಿಯಬೇಕಾದರೆ ಚರಕಾದ ಇಡೀ ಜೀವನಚರಿತ್ರೆಯನ್ನು ತಿಳಿಯಬೇಕಾಗುತ್ತದೆ. ಗಾಂಧೀಜಿ ಯಾವ ರೀತಿ ಚರಕಾವನ್ನು ಕೇವಲ ಸ್ವರಾಜ್ಯ ಪ್ರಾಪ್ತಿಯ ಅಸ್ತ್ರವನ್ನಾಗಿ ಮಾಡದೆ ಸ್ವರಾಜ್ಯವನ್ನು ಉಳಿಸಿಕೊಂಡು ಬರುವ ಸಾಧನವನ್ನಾಗಿಯೂ ಹೇಗೆ ಮಾಡಿದರೆಂಬುದನ್ನು ಸಹ ನಾವು ತಿಳಿಯಬೇಕಾಗುತ್ತದೆ.

ನಮ್ಮ ದಾಸ್ಯತೆಯ ಬಹುದೊಡ್ಡ ಕಾರಣ ನಮ್ಮ ಬಟ್ಟೆ ಉದ್ಯಮದ ಸರ್ವನಾಶವೆಂದು ಗಾಂಧೀಜಿ ಭಾವಿಸಿದ್ದರು. ಇಂಗ್ಲೀಷರ ಆಡಳಿತ ನಮ್ಮ ನೇಕಾರರ ಹೆಬ್ಬೆಟ್ಟುಗಳನ್ನು ಕತ್ತರಿಸಿತು, ಲಂಕಾಷೈರ್ ಮತ್ತು ಮ್ಯಾಂಚೆಸ್ಟರ್‌ನ ಮಿಲ್ಲುಗಳ ಬಟ್ಟೆಯಿಂದ ಹಿಂದೂಸ್ಥಾನವನ್ನು ತುಂಬಿಬಿಟ್ಟಿತು. ನಮ್ಮ ಬಡತನ ಮತ್ತು ದರಿದ್ರತೆಯ ಬಹುದೊಡ್ಡ ಕಾರಣ ಇದೇ.

ನೇಯ್ಗೆಯ ಹಾಸು-ಹೊಕ್ಕು ಎಂಬುದನ್ನು ವೈಚಾರಿಕ ಆಧಾರದ ಮೇಲೆ ಭಾರತದ ಹಳ್ಳಿಗಳಲ್ಲಿ ವ್ಯಾಪಿಸಿದ್ದ ಅರ್ಧ ನಿರುದ್ಯೋಗಿ ಮತ್ತು ಪೂರ್ಣ ನಿರುದ್ಯೋಗಿ ಜನರಿಗಾಗಿ ಇರುವ ಪೂರಕ ದಂಧೆಯ ರೂಪದಲ್ಲಿ ಖಾದಿ ನೇಯಲಾಯಿತು. ಖಾದಿಯ ಈ ಹಾಸು-ಹೊಕ್ಕನ್ನು ಮುಖ್ಯವಾಗಿ ಗ್ರಾಮೀಣ ಜನರಿಗಾಗಿ ನೇಯಲಾಯಿತು. ಖಾದಿ ಎಲ್ಲಕ್ಕಿಂತ ಸರಳ ಮತ್ತು ಸಾಧಾರಣ ತಂತ್ರಜ್ಞಾನದ ಮೇಲೆ ಆಧಾರಿತವಾಗಿದೆ. ಇದರ ಉತ್ಪಾದನೆ ಮತ್ತು ಉಪಯೋಗ ಇವೆರಡರ ಸ್ರೋತ ಸ್ಥಾನೀಯ ರೂಪದಲ್ಲಿ ಉಪಲಬ್ಧವಾಗುತ್ತದೆ. ಅರ್ಥಾತ್ ಖಾದಿಯ ಉತ್ಪಾದನೆಗಾಗಿ ಅವಶ್ಯಕ ಹತ್ತಿ ಮತ್ತು ಅದರಿಂದ ತಯಾರಾದ ಬಟ್ಟೆಗಾಗಿ ಪೇಟೆ ಕೂಡ ಸ್ಥಾನೀಯ ಹಂತದಲ್ಲೆ ಉಪಲಬ್ಧವಾಗುತ್ತದೆ. ಆದ್ದರಿಂದ ಖಾದಿಯ ಸಂಬಂಧ ಹಳ್ಳಿಯ ಜೊತೆಗೆ ಹೆಚ್ಚು ಬರುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ

ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಭೀಮಸೇನ್ ಅಥಣೀಕರ್, ಶ್ರೀ ಎಸ್.ಎಸ್.ಜೋಷಿ – ಬೆಂಗಳೂರು

ಶ್ರೀ ಟಿ.ಎಲ್.ಸುದರ್ಶನಮೂರ್ತಿ, ಶ್ರೀ ಎನ್.ಶ್ರೀನಿವಾಸಗೌಡ – ಕೋಲಾರ

ಶ್ರೀ ನರಸಿಂಹ – ಮೇಲುಕೋಟೆ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ

ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಎಂ.ವಿ.ಲೋಕೇಶ್, ಶ್ರೀ ಆರ್.ದೇಸಾಯಿ,

ಶ್ರೀ ಸಿ.ವೆಂಕಟೇಶ್ – ರಾಮನಗರ

ಶ್ರೀ ಕೆ.ವಿ.ಪತ್ತಾರ್ – ಹೊಸಪೇಟೆ

ಶ್ರೀ ಜೆ.ರಾಜಶೇಖರ್ – ಮದ್ದೂರು

ಶ್ರೀ ಮಧುರೆ ತಿಮ್ಮಾರೆಡ್ಡಿ – ಚಿಕ್ಕಮಧುರೆ

ಶ್ರೀ ಜೆ.ಶ್ರೀನಿವಾಸ್ – ಮೇಲುಕೋಟೆ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ



KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431. Phone : 08236 316344 - e-mail : janapada@yahoo.com - web : janapada.net
Printed at Sanketh Mudrana, Melkote.